ಡಾ. ಕರವೀರಪ್ರಭು ಕ್ಯಾಲಕೊಂಡ

ಚಾಲುಕ್ಯ ವಾಸ್ತುಶಿಲ್ಪ ವೈಭವ



ಚಾಲುಕ್ಯ ವಾಸ್ತುಶಿಲ್ಪ ವೈಭವ

ಡಾ. ಕರವೀರಪ್ರಭು ಕ್ಯಾಲಕೊಂಡ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

CHALUKYA VAASTUSHILPA VAIBHAVA - By Dr. Karaveera Prabhu Kyalakonda, Published by The Director, Prasaranga, Kannada University, Hampi, Vidyaranya, Kamalapura - 583 221 First Impression 1997, Pp ii +34 , Rs. 2-00

ಮಂಟಪ ಮಾಲೆ ೩೧

ಪ್ರಕಾಶಕರು
ಎ. ವಿ. ನಾವಡ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ ೫೮೩ ೨೨೧

ಬೆಲೆ ರೂ. ೨.೦೦

ಮುದ್ರಣ
ವಾಯ್ಸ್ ಆಫ್ ಇಂಡಿಯಾ ಪ್ರೆಸ್
ಬೆಂಗಳೂರು ೫೬೦ ೦೯೫
ದೂರವಾಣಿ : 5538526

ಚಾಲುಕ್ಯ ವಾಸ್ತುಶಿಲ್ಪ ವೈಭವ

ಶಿಲ್ಪಕಲಾ ಪರಂಪರೆಯು ಒಂದು ಅನಂತವಾಹಿನಿ. ಅದರ ವೈಭವವು ಒಂದು ಅಭೂತಪೂರ್ವದರ್ಶನ. ಕೇದಾರದಿಂದ ಕನ್ಯಾಕುಮಾರಿಯವರೆಗೆ, ಸಾಗರದ್ವೀಪದಿಂದ ದ್ವಾರಕದವರೆಗೆ ಭಾರತೀಯ ಶಿಲ್ಪಕಲೆಯ ವಿಸ್ತಾರ, ಹರವು, ಶೈಲಿ ಹಲವಾರು. ಸೌಂದರ್ಯ ಒಂದೇ; ಕರ್ನಾಟಕ ಶಿಲ್ಪ ಕಲೆಯ ತೂಗು ತೊಟ್ಟಿಲು, ಕಲ್ಲಲ್ಲಿ ಕಲೆಯರಳಿಸಿ ಶಿಲ್ಪದ ಬೃಹತ್ ಮಹತ್ ಕೃತಿಗಳನ್ನು ಕಟೆದು ನಿಲ್ಲಿಸಿ ದೇವಗಾನ ಹೊರಹೊಮ್ಮಿಸಿದವರು ಕನ್ನಡದ ಶಿಲ್ಪ ರೂವಾರಿಗಳು. 'ಕಲ್ಲು' ಶಿಲ್ಪಗೀತೆಗಳ ಜೀವದ್ರವ್ಯ. ಕಲ್ಲು ಶಿಲ್ಪಕಲಾ ವಿಲಾಸಕ್ಕೆ ಗರಿ ಮೂಡಿಸಿದ ಜೀವಧಾತು.

ಕನ್ನಡ ನಾಡಿನ ಸಂಸ್ಕೃತಿ, ಶಿಲ್ಪಕಲೆ ಶ್ರೀಮಂತಿಕೆಯನ್ನು ದೇಶದ ಉದ್ದಗಲಕ್ಕೂ ಹರಡಿದ ಕೀರ್ತಿ ಚಾಲುಕ್ಯರದು. ವಾಸ್ತುಶಿಲ್ಪ ಕಲಾ ಕ್ಷೇತ್ರಗಳಲ್ಲಿ ಇವರು ಸಾಧಿಸಿದ ಸಾಧನೆ ಅದ್ಭುತ ಮತ್ತು ಮಹತ್ವಪೂರ್ಣವಾದುದು. ಚಾಲುಕ್ಯರ ಪ್ರಮುಖ ಕೇಂದ್ರಗಳಾದ, ಐಹೊಳೆ, ಬಾದಾಮಿ, ಮಹಾಕೂಟ ಮತ್ತು ಪಟ್ಟದಕಲ್ಲು ಶಿಲ್ಪಶೈಲಿಯ ಪ್ರಯೋಗದ ವಿವಿಧ ಹಂತಗಳನ್ನು ಪ್ರತಿನಿಧಿಸುತ್ತವೆ. ವೀಕ್ಷಿಸುವಾಗ ಯಾವುದೋ ಲೋಕದಲ್ಲಿ ವಿಹರಿಸುವ ಭಾವನೆ ಬರುತ್ತದೆ. ಅಂದರೆ, ಆ ಕಾಲಕ್ಕೆ ನಮ್ಮ ಭಾವನೆಗಳನ್ನು ಹೊತ್ತೊಯ್ಯುತ್ತಿರುವ ಆಗರ. ಚಾಲುಕ್ಯರ ನಾಡಿನಲ್ಲೆಲ್ಲಾ ಕಲ್ಲುಗಳ ಮೇಲೆ ಕಲೆಯ ಚೇಲುವು ಚೇಲ್ಲುವರಿದಿದೆ. ಕಲ್ಲರಳಿ ಕಲೆಯಾಗಿದೆ.

'' ಇಳೆಯೆಂದರೆ ಬರೀ ಮಣ್ಣಲ್ಲ!

ನಮಗದ ನೋಡುವ ಕಣ್ಣಲ್ಲ!!''

ವರಕವಿ ಬೇಂದ್ರೆಯವರು ಅನ್ನುವ ಹಾಗೆ ಹಿಡಿಮಣ್ಣಿನಲ್ಲಿಯೂ ಇತಿಹಾಸದ ಗತವೈಭವ ಅಡಗಿದೆ. ಅದನ್ನು ನೋಡುವ 'ಕಣ್ಣು' ಬೇಕಷ್ಟೇ!

ಸ್ವಸ್ತಿ...ಸತ್ಯತಾಗ ಕಾರ್ಯಾದಿಗುಣನಿಳಯಃ ಕೇವಳ ನಿಜ

ಧ್ವಜನೀ ಜವ ಕ್ಷಪಿತ ಪ್ರತಿಪಕ್ಷ ಕ್ಷಿತೀಶವಂಶಃ ಶ್ರೀಮಾನ್

ಅಸ್ತಿ ಚಾಳುಕ್ಯವಂಶಃ !!

-ಗದಗ ಶಾಸನ

ಕನ್ನಡ ನಾಡಿನಲ್ಲಿ ಘಾನವೆತ್ತ ಅರಸುಮನೆತನ ಚಾಲುಕ್ಯರದು. ಕರ್ನಾಟಕ ಸಾಮ್ರಾಜ್ಯದ ಮಹಾಧ್ವಜವನ್ನು ಮೊದಲಬಾರಿ ಬೃಹತ್ ಭಾರತದಲ್ಲಿ ಎತ್ತಿ ಮೇರೆಯಿಸಿದ ಗುಣಗೌರವ ಚಾಲುಕ್ಯ ಕುಲಕ್ಕೆ ಮೀಸಲಾಗಿದೆ. ಚಾಲುಕ್ಯ ಕಲಾ ಪ್ರಜ್ಞೆ ಪ್ರತಿಮಾಸಿದ್ಧಿಯನ್ನು ಗಳಿಸಿ ಗುಹಾಶಿಲ್ಪ ಮತ್ತು ಮಂದಿರ ಶಿಲ್ಪಗಳ ಸುರಲೋಕದಲ್ಲಿ ವಿಹರಿಸಿತು. ಭಾರತೀಯರ ಎಲ್ಲ

ಕಲೆಗಳಂತೆ ಶಿಲ್ಪಕಲೆಯಾದರೂ ಧರ್ಮಭಾವನೆಯಲ್ಲಿ ಬೇರೂರಿ ಧಾರ್ಮಿಕ ಆವರಣದಲ್ಲಿ ಉತ್ಕರ್ಷ ಪಡೆಯಿತು.

ಚಾಲುಕ್ಯರ ವಾಸ್ತುಶಿಲ್ಪವು ಉತ್ತರ ಭಾರತದಲ್ಲಿ ಆಳುತ್ತಿದ್ದ ಗುಪ್ತರ ಕಲೆಯಿಂದ ಹುಟ್ಟಿದೆಯೆಂದು ಕೆಲವರು ಹೇಳುತ್ತಾರೆ. ಅದು ಆಂಧ್ರ ಪ್ರದೇಶದಲ್ಲಿ ಆಳುತ್ತಿದ್ದ ಇಕ್ಷ್ವಾಕುರಾಜರ ಶಿಲ್ಪದಿಂದ ಉಗಮ ಹೊಂದಿದೆಯೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ ಚಾಲುಕ್ಯರ ಶಿಲ್ಪವು ಬೇರೆ ಕಡೆಯಿಂದ ಕರ್ನಾಟಕಕ್ಕೆ ಬಂದಿರದೆ ಸ್ವತಂತ್ರವಾಗಿ ಈ ನಾಡಿನಲ್ಲಿಯೇ ಬೆಳೆದು ಬಂದಿದೆ ದೇವಾಲಯಗಳ ಮುಂಭಾಗದಲ್ಲಿ ಗಂಗಾ, ಯಮುನೆಯರ ವಿಗ್ರಹಗಳನ್ನು ಕೆತ್ತುವುದು, ಶಂಖನಿಧಿ ಮತ್ತು ಪದ್ಮನಿಧಿಶಗಳನ್ನು ಇಡುವುದು ಮತ್ತು ದ್ರಾವಪಾಲಕರನ್ನು ನಿಲ್ಲಿಸುವುದು ಗುಪ್ತರ ಸಂಪ್ರದಾಯದ ಅನುಕರಣೆಯೆಂದು ತೋರಿದರೂ ಈ ಚಾಲುಕ್ಯ ಶಿಲ್ಪಿಗಳು ತಮ್ಮ ಸ್ವಂತ ಕಲ್ಪನೆಯನ್ನು ಉಪಾಯೋಗಿಸಿ ಈ ಮೂರ್ತಿಗಳನ್ನು ನಿರ್ಮಿಸಿದ್ದಾರೆ.

ಧಾರ್ಮಿಕ ಭಾವನೆ, ವ್ಯಾಪಾರೀ ವೃತ್ತಿ ಮತ್ತು ಸೌಂದರ್ಯೋಪಾಸನೆಗಾಗಿ ಭಾರತದ ಬೇರೆ ಬೇರೆ ಭಾಗಗಳಿಗೆ ಹೋಗಿ ಸಂಚರಿಸುವ ಪದ್ಧತಿಯು ಕನ್ನಡಿಗರಲ್ಲಿ ಪೂರ್ವಕಾಲದಿಂದ ಇದ್ದರೂ ಸಹ ಆ ಭಾಗಗಳಿಂದಲೇ ತಂದ ಸಾಂಪ್ರದಾಯಗಳಿಂದ ಬಾದಾಮಿ ಚಾಲುಕ್ಯರ ವಾಸ್ತುಶಿಲ್ಪವು ಉಗಮಗೊಂಡಿತೆಂದು ಹೇಳಲು ಬರುವುದಿಲ್ಲ. ಅವರು ತಾವು ಬೇರೆ ಕಡೆಗೆ ನೋಡಿದ ಉತ್ತಮ ಕಲಾಂಶವನ್ನು ತಮ್ಮ ನಾಡಿನಲ್ಲಿ ತರಲು ಯತ್ನಿಸಿರಬಹುದು ಆದರೆ ಅವರ ಮೂರ್ತಿಗಳ ಅಂಗರಚನೆ, ಹಾವಭಾವ, ಅಲಂಕಾರ ಪದ್ಧತಿ, ಸಾಮಾಜಿಕ ಜೀವನವನ್ನು ನಿರೂಪಿಸುವ ಕಲೆ ಮತ್ತು ರೇಖಾ ವಿನ್ಯಾಸ ಸ್ವತಂತ್ರವಾಗಿವೆ. ಇವರು ಎಳೆದ ಗೆರೆಗಳು ಬಹು ಪರಿಣಾಮಕಾರಿಯಾಗಿ, ಸ್ವತಂತ್ರ ಕಲ್ಪನಾ ಸಾಮರ್ಥ್ಯದಿಂದ ಕೂಡಿವೆ. ಈ ಶಿಲ್ಪಗಳ ಉಳಿಯಹೊಡೆತಕ್ಕೆ ಅವರು ಉಪಯೋಗಿಸಿದ ಕೆಂಪು ಉಸುಕು ಕಲ್ಲು ನಯವಾಗಿ ಮಣದಿದೆ. ಒಂದೊಂದು ಅವಯವ ಮತ್ತೊಂದು ಅವಯವದೊಡನೆ ಬೆರೆತು ಮೂರ್ತಿಗೆ ವಿಶೇಷ ಕಳೆಯನ್ನು ತಂದೊಡ್ಡಿದೆ. ಮೂರ್ತಿಯ ಇಡೀ ದೇಹದಲ್ಲಿ ಏಕತೆಗೆ ಲಯವು ನಿನದಿಸುತ್ತದೆ. ಈ ಮೂರ್ತಿಗಳಿಗೆ ತಾದಾತ್ಮ್ಯತೆ, ಸಮತೋಲತ್ವ ಇರುವವು. ದೇವರ ಮೂರ್ತಿಗಳನ್ನು ನಿರ್ಮಿಸುವಾಗ ಚಾಲುಕ್ಯ ಶಿಲ್ಪಿಗಳು ಅವುಗಳ ಅಂತರ್ದೃಷ್ಟಿ, ಅಂತಸ್ತತ್ವವನ್ನು ಹೊರಹೊಮ್ಮಿಸಿದ್ದಾರೆ. ತೌಕಿಕ ಮೂರ್ತಿಗಳನ್ನು ರಚಲಸುವಾಗ ಅವುಗಳಲ್ಲಿ ಶೃಂಗಾರಭಾವವನ್ನೂ, ರಾಗದ್ವೇಷವನ್ನೂ, ಹಾಸ್ಯವನ್ನೂ. ಶಾಂತಭಾವನೆಯನ್ನೂ, ರೌದ್ರತೆಯನ್ನೂ ತುಂಬಿದ್ದಾರೆ. ಸ್ತ್ರೀಯ ವಿಗ್ರಹಗಳನ್ನು ನಿರ್ಮಿಸುವಾಗ ಶಿಲ್ಪಿಗಳು ತಮ್ಮ ಕಲ್ಪನಾ ಸಾಮರ್ಥವನ್ನು ಸೂರೆಗೊಂಡಿದ್ದಾರೆ. ಸ್ತ್ರೀಯ ವಿಗ್ರಹಗಳನ್ನು ನಾನಾ ಭಂಗಿಗಳಲ್ಲಿ ಕೆತ್ತಿ ಅವು ಲೌಕಿಕ ಜೀವನದ ಸನ್ನಿವೇಶಗಳಿಗೆ ಅನುಗುಣವಾಗುವಂತೆ ಚಿತ್ರಿಸಿರುವರು. ಪುರುಷರೇ ಆಗಿದ್ದ ಈ ಚಾಲುಕ್ಯ ಶಿಲ್ಪಿಗಳು ಸ್ತ್ರೀಯ ಅಂಗಾಂಗಗಳನ್ನು, ಕವಿಯು ಸ್ತ್ರೀಯನ್ನು ಶಬ್ಧ ಸೌಷ್ಟವದಿಂದ ಚಿತ್ರಿಸುವಂತೆ ಉಳಿಯ ಮೂಲಕ ಚಿತ್ರಿಸಿದ್ದಾರೆ. ದೇವರ ಮೂರ್ತಿಗಳನ್ನು ತಯಾರಿಸುವಾಗ ಸಹ ಅದೇ ತರಹದ

ತನ್ಮಯತೆ, ಭಕ್ತಿ ಭಾವಗಳನ್ನು ವ್ಯಕ್ತಪಡಿಸಿದ್ದಾರೆ. ದೇವತೆಯ ವಿಗ್ರಹಗಳು ಶಾಂತ, ರೌದ್ರ, ಭಯಾನಕ, ಹಾಸ್ಯ ಭಾವಗಳುಳ್ಳವುಗಳಾಗುವಂತೆ ಕೆತ್ತಿದ್ದಾರೆ. ಅವುಗಳ ಪಾತ್ರಕ್ಕೆ ತಕ್ಕ ಹಾವ ಭಾವಗಳು ಅವುಗಳ ಮುಖ ಮತ್ತು ಅಂಗರಚನೆಯಲ್ಲಿ ಕಂಡು ಬರುವುದು.

ಚಾಲುಕ್ಯ ಶಿಲ್ಪಗಳು ಬೃಹದಾಕಾರದ ದೇವತಾ ವಿಗ್ರಹಗಳನ್ನು, ಮಧ್ಯಮಾಕಾರದ ಮೂರ್ತಿಗಳನ್ನು ಐಹೊಳೆಯ ದುರ್ಗದ ಗುಡಿಯ ಹೊರಗೋಡೆಯ ಮಾಡಗಳಲ್ಲಿ, ಲಾಡಖಾನ ಗುಡಿಯ ಮುಖ ಮಂಟಪದ ಕಂಬಗಳ ಮೇಲೆ, ಪಟ್ಟದಕಲ್ಲಿನ ವಿರೂಪಾಕ್ಷ, ಮಲ್ಲಿಕಾರ್ಜುನ ಮತ್ತು ಪಾಪನಾಥ ಗುಡಿಗಳಲ್ಲಿ, ಮಹಾಕೂಟದ ಮಲ್ಲಿಕಾರ್ಜುನ ಗುಡಿಯಲ್ಲಿ ನೋಡಬಹುದು. ಲೌಕಿಕ ಜೀವನದಲ್ಲಿ ಮಗ್ನವಾಗಿರುವ ಮಿಥುನಗಳನ್ನು ಐಹೊಳೆಯ ದುರ್ಗದ ಗುಡಿಯ ಕಂಬಗಳ ಮಧ್ಯಭಾಗದಲ್ಲಿ, ಲಾಡಖಿನ ಗುಡಿಯ ಮೇಲೆ ಹುಚ್ಚಪ್ಪಯ್ಯನ ಮಠದ ಹೊರಗೋಡೆಯ ಮೇಲೆ, ಕೊಂತಿಗುಡಿ ಕಂಬಗಳ ಮೇಲೆ, ಮಹಾಕೂಟೇಶ್ವರ ಮಂದಿರದ ಎದುರಿನ ಮಂಟಪದ ಕಂಬಗಳ ಮೇಲೆ ಕಾಣಬಹುದು. ಈ ಎಲ್ಲ ಮೂರ್ತಿಗಳನ್ನು ಶಿಲ್ಪಿಗಳು ಸುಂದರವಾಗಿ ಕೆತ್ತಿದ್ದಾರೆ.

ಕುಬ್ಜಮೂರ್ತಿಗಳು ಕಡಿಮೆ ಪ್ರಾಮುಖ್ಯತೆ ಹೊಂದಿ ಅಭಿಷ್ಠಾನದ ಮುಂಭಾಗದಲ್ಲಿ ಕಾಣಸಿಗುತ್ತವೆ. ಅವು ಮುಖ್ಯ ಮೂರ್ತಿಗಳ ಬದಿಗೆ ಇದ್ದುದನ್ನು ಐಹೊಳೆಯ ಹುಚ್ಚಪ್ಪಯನ ಮಠದ ಹೊರಗೋಡೆಯ ಮೇಲೆ, ಮೇಗುಟಿ ಗುಡಿಯ ಅಭಿಷ್ಠಾನದ ಮೇಲೆ, ರಾವಳಪಡಿಯ ಮುಂಭಾಗದೊಳಗಿನ ಅಭಿಷ್ಠಾನದ ಮೇಲೆ, ಪಟ್ಟದಕಲ್ಲಿನ ಪಾಪನಾಥ ಗುಡಿಯ ಒಳಾವರಣದಲ್ಲಿ, ಬಾದಾಮಿ ಗುಹೆಗಳ ಅಭಿಷ್ಠಾನದ ಮೇಲೆ ಮತ್ತು ಮದನಿಕೆಯ ವಿಗ್ರಹಗಳ ಬದಿಗೆ ನೋಡಬಹುದು.

ಚಾಲುಕ್ಯರ ವಾಸ್ತುಶಿಲ್ಪದಲ್ಲಿ ಎರಡು ಪ್ರಕಾರದ ಮೂರ್ತಿಗಳನ್ನು ಕಾಣುತ್ತೇವೆ. ಒಂದು, ಬೇರೆ ಸ್ಥಳದಲ್ಲಿ ಅವುಗಳನ್ನು ಕಡೆದು ಗೋಡೆಗಳಲ್ಲಿ ತಂದು ಇಡುವದು, ಮತ್ತೊಂದು ಗೋಡೆಯಲ್ಲಿ ಕಟ್ಟಿದ ಕಲ್ಲನೇ ಹೊಡೆದು ಮೂರ್ತಿಗಳನ್ನು ತಯಾರಿಸುವುದು.

ಮೊದಲನೆಯ ತರಹದ ಉದಾಹರಣೆಯು ಐಹೊಳೆಯ ದುರ್ಗದ ಗುಡಿಯಲ್ಲಿಯ ಶಿಲಾಫಲಕಗಳನ್ನು ಮತ್ತು ಅದೇ ಊರ ಹುಚ್ಚಪ್ಪಯ್ಯನಮಠ ಮತ್ತು ಇತರ ಗುಡಿಯಲ್ಲಿಯ ಶಿಲಾಫಲಕ ಮತ್ತು ಕಂಬಗಳನ್ನು ಹೇಳಬಹುದು. ಎರಡನೆಯ ಪದ್ಧತಿಯ ಉದಾಹರಣೆಯೆದು ಪಟ್ಟದಕಲ್ಲಿನ ಸಂಗಮೇಶ್ವರ ಗುಡಿಯ ಹೊರಗೋಡೆಯ ಮೇಲಿನ ಸ್ಥೂಲ ರೇಖಾ ಚಿತ್ರ ಅಥವಾ ಹೊಳವನ್ನು, ಐಹೊಳೆಯ ಹುಚ್ಚಮಲ್ಲೀ ಗುಡಿಯಲ್ಲಿ ಕಂಬದ ಮೇಲೆ ಅಪೂರ್ಣವಾಗಿ ಕೆತ್ತಿದ ಸುಳಿಯನ್ನು ಮತ್ತು ಮೇಗುಟ ಗುಡಿಯಲ್ಲಿಯ ಅಪೂರ್ಣ ಚಿತ್ರಗಳನ್ನು ಹೇಳಬಹುದು.

ಬಾದಾಮಿಯ, ಐಹೊಳೆಯ ಗುಹೆಗಳಲ್ಲಿಯ ಭಿತ್ತಿನೊಳಗಿನ ಮೂರ್ತಿಗಳನ್ನು ಮತ್ತು ಸುಳಿವು ಮೊದಲಾದ ಚಿತ್ರಗಳನ್ನು ಶಿಲ್ಪಿಗಳು ಬಹು ಶ್ರಮಪಟ್ಟು ಮತ್ತು ದಕ್ಷತೆಯಿಂದ ಕೆತ್ತಿದ್ದಾರೆ. ಅವರು ಅಂಗಾತ ಮಲಗಿಕೊಂಡು, ಉಳಿಯಿಂದ ಈ ಚಿತ್ರಗಳನ್ನು

ಕೆತ್ತಬೇಕಾಗಿತ್ತು. ಗುಹೆಯೊಳಗೆ ಕತ್ತಲೆ ಇದ್ದುದರಿಂದ ಮರು ಪ್ರಕಾಶವನ್ನು ಉಪಯೋಗಿಸಿ ಬಿರುಸಾದ ಕಲ್ಲಿನಲ್ಲಿ ಚಿತ್ರಗಳನ್ನು ಕೆತ್ತಬೇಕಾಗಿತ್ತು. ಹೀಗೆ ಶ್ರಮಪಡಲು ಈ ಶಿಲ್ಪಿಗಳಿಗೆ ತಮ್ಮ ಕೆಲಸದಲ್ಲಿದ್ದ ಆಸಕ್ತಿ, ಚಾಲುಕ್ಯ ಅರಸರ ಪ್ರೋತ್ಸಾಹ ಕಾರಣ.

ಚಾಲುಕ್ಯ ವಾಸ್ತುಶಿಲ್ಪದ ಮೂರ್ತಿಗಳು ಪ್ರಮಾಣಬದ್ಧವಾಗಿದ್ದು, ಉತ್ತಮ ಭಾವದಿಂದ ಕೂಡಿದವುಗಳಾಗಿವೆ. ಅವುಗಳ ವಸ್ತ್ರ ಮತ್ತು ಅಲಂಕಾರಗಳಲ್ಲಿ ಹೊಯ್ಸಳ ಶಿಲ್ಪದಲ್ಲಿ ಕಾಣುವ ಬಂಗಾರ, ಬೆಳ್ಳಿಯ ಅಲಂಕಾರದ ವಸ್ತುಗಳಲ್ಲಿ ಆಗಬಹುದಾದ ಅನಾವಶ್ಯಕ ಕುಸುರಿನ ಕೆಲಸದ ಹೆಚ್ಚಳವಿಲ್ಲ. ಪ್ರಮಾಣತೆ ಮತ್ತು ಜೀವಕಳೆಯು ಚಾಲುಕ್ಯ ವಾಸ್ತುಶಿಲ್ಪದ ವೈಶಿಷ್ಟ್ಯಗಳು. ಚಾಲುಕ್ಯ ವಾಸ್ತುಶಿಲ್ಪವು ಅಖಂಡ ಮೂರು ಶತಮಾನಗಳ ವರೆಗೆ ಐಹೊಳೆ, ಬಾದಾಮಿ, ಪಟ್ಟದಕಲ್ಲು, ಮಹಾಕೂಟ ಮೊದಲಾದ ಊರುಗಳಲ್ಲಿ ಉಚ್ಚಮಟ್ಟದಲ್ಲಿ ಬೆಳೆದು ಬಂದಿದೆ. ಜಾನಪದ ಕವಿಗಳು ಇದನ್ನು ಮನಮುಟ್ಟುವಂತೆ ಹಾಡಿದ್ದಾರೆ-

''ಅಂದದ ಐಹೊಳೆ, ಚೆಂದದ ಬಾದಾಮಿ

ಚೆಲುವಿನ ಸಿರಿ ಪಟ್ಟದಕಲ್ಲ। ಬಸವಣ್ಣ

ಬಂದ ಕಂಠಕ ಬಯಲಾತೊ''॥

ಆ ಕಲೆಯನ್ನು ಮಿಕ್ಕುವಂಥ ಮತ್ತೊಂದು ಕಲೆ ನಮ್ಮ ಕರ್ನಾಟಕದಲ್ಲಿ ಇನ್ನೂ ಹುಟ್ಟಿಬಂದಿಲ್ಲ. ಅಂಥಾ ಕಲಾ ಪ್ರೌಢಿಮೆಯನ್ನು ಚಾಲುಕ್ಯ ವಾಸ್ತುಶಿಲ್ಪ ಪಡೆದಿದೆ.

ನಮ್ಮ ದೇಶದಲ್ಲಿ ಸಾಹಿತ್ಯವನ್ನು ಬಿಟ್ಟರೆ, ಜನರ ಅಂತರಂಗ ಚರಿತ್ರೆ ಮೂರ್ತಿಭವಿಸಿ ನಿಂತಿರುವುದು ನಮ್ಮ ದೇವಾಲಯ ಶಿಲ್ಪಗಳಲ್ಲಿ.

''ಅಳಿವ ಲೋಕದ ನಡುವೆ।

ಉಳಿವ ರಸಘಟಿಕೆ॥

ಬಾಳ್ವೇನ ಗೂಡು

ಕಲೆಯಿಂದ ಶಿಲೆಯಮೃತ।

ಲಲಿತ ಕಲೆ ಹೃತ್ ಸುಕೃತ್....''॥

ಕವಿವಾಣಿ ಅರ್ಥಪೂರ್ಣವಾಗಿದೆ. ಚಾಲುಕ್ಯರ ವಾಸ್ತುಶಿಲ್ಪ ವೈಭವನ್ನು, ಹಿರಿಮೆ, ಗರಿಮೆಯನ್ನು ಸಂಕ್ಷಿಪ್ತದಲ್ಲಿ ಹೇಳುವುದಾದರೆ ಷೇಕ್ಸ್‌ಪಿಯರನ ನುಡಿಗಳನ್ನೇ ಉದ್ಗರಿಸಬೇಕು-

''ಕಾಲಪ್ರಭಾವ ಆಕೆಯ ಸೌಂದರ್ಯವನ್ನು ಎಂತೂ ಕಳೆಗುಂದಿಸದು, ಸಂಪ್ರದಾಯದ ಗುಂಗು ಆಕೆಯ ಅಗಣಿತ ವೈವಿಧ್ಯತೆಯನ್ನು ನೀರಸಗೊಳಿಸದು''.

ವಾಸ್ತುಶಿಲ್ಪದ ಮೊದಲ ಮೆಟ್ಟಲು-

ಬಾದಾಮಿಯ ಬೃಹತ್ ಗಿರಿದುರ್ಗ.

ಬಾದಾಮಿ ೬ನೇ ಶತಮಾನದಿಂದ ೮ನೇ ಶತಮಾನದವರೆಗೆ ಚಾಲುಕ್ಯರ ರಾಜಧಾನಿಯಾಗಿತ್ತು. ಬಾದಾಮಿ ಕೋಟೆ ಉತ್ತರಭಾಗದಲ್ಲಿರುವ ಬೆಟ್ಟ, ದಕ್ಷಿಣ ಭಾಗದಲ್ಲಿರುವ ಬೆಟ್ಟ ಮತ್ತು ಇವೆರಡರ ಮಧ್ಯ ಇದೆ. ಹಿರಣ್ಯಗರ್ಭ ಜನಿಸಿದ ಚಾಲುಕ್ಯ ವಲ್ಲಭೇಶ್ವರನು (ಮೊದಲನೆಯ ಪುಲಿಕೇಶಿ) 'ಅಶ್ವಮೇಧ', ವಿಜಯಶ್ರೀಯ ಯಾಗಗಳನ್ನು ಮಾಡಿ ಈ ಧರೆಯ ಮೇಲೆ ಬಲಾಢ್ಯ ದೊರೆಯಾದ ಈತನು ಬಾದಾಮಿಯಲ್ಲಿ ಅಜೇಯವಾದ, ಅಭೇದ್ಯವಾದ ಬೃಹತ್ ಕೋಟೆಯನ್ನು ಕ್ರಿ.ಶ. ೫೪೩ (ಶಕ ವರ್ಷ ೪೬೫) ರಲ್ಲಿ ಕಟ್ಟಿಸಿದನು ಎಂದು ಅಗಸ್ತ್ಯತೀರ್ಥದ ಉತ್ತರಕ್ಕಿರುವ ಗುಡ್ಡದಲ್ಲಿಯ ಶಾಸನವೊಂದು ಹೇಳುತ್ತದೆ.

ಸ್ವಸ್ತಿ ಶಕವರ್ಷೇಷು ಚತ್ವುತೇಷು ಪಶ್ಚಿಮ ಷಷ್ಠಿಯುತೇಷು

ಅಶ್ವಮೇಧಾದಿಯಜ್ಞಾನಾಂಯಜ್ವಾ ಶ್ರೌತವಿಧಾನತಃ

ಹಿರಣ್ಯಗರ್ಭಸಮ್ಭೂತಶ್ಚಲಿಕ್ಯೋ ವಲ್ಲಭೇಶ್ವರಃ

ಧರಾಧರೇನ್ದ್ರ ವಾತಾಪಿಮಜೇಯಂಮ್ಭೂತಯೇಭುವಃ

ಅಧಸ್ತಾದು ಪರಿಷ್ಟಾಚ್ಚ ದುರ್ಗ್ಗ ಮೇತದ ಚೀಕರತ್॥

ಚಾಲುಕ್ಯರ ವಾಸ್ತುಶಿಲ್ಪ ವೈಭವ ಅಂಕುರಗೊಂಡದ್ದೇ ಕೋಟೆಯ ನಿರ್ಮಿತಿಯಲ್ಲಿ ಇದು ವಾಸ್ತುಶಿಲ್ಪ ವಿಕಾಸದ ಮೊಟ್ಟಮೊದಲ ಮೆಟ್ಟಲು. ಕಾಲಮಾನದೃಷ್ಠಿಯಿಂದ ನೋಡಿದರೆ ಬಾದಾಮಿ ಚಾಲುಕ್ಯರ ಈ ಕೋಟೆಯು ಪ್ರಾಚೀನ ದಕ್ಷಣ ಭಾರತದಲ್ಲಯೇ ಮೊದಲನೆಯ ಗಿರಿದುರ್ಗವಾಗಿದೆ. ಗುಡ್ಡದ ಬಂಡೆಗಲ್ಲುಗಳ ನಡುವಿನ ಕಿಂಡಿಗಳನ್ನು ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸಿ ರಚಿಸಿದ ರಕ್ಷಣಾಗೋಡೆಗಳಿಂದ ಜೋಡಿಸಿದ ಕೋಟೆಯ ವಿನ್ಯಾಸ ಅತ್ಯಂತ ಕುತೂಹಲಕಾರಿಯಾಗಿದೆ. ಚಾಲುಕ್ಯ ಅಳರಸರ ಚಾಣಾಕ್ಷತನ ಚೆಲ್ಲುವರಿದಿದೆ. ಸ್ಥಪತಿಗಳ ಸಮಯಪ್ರಜ್ಞೆ, ನೈಪುಣ್ಯತೆಗೆ ಸಾಕ್ಷಿಯಾಗಿದೆ. ಆರನೇ ಶತಮಾನದಲ್ಲಿ ಆರಂಭವಾದ ಈ ಕೋಟೆ ಬೇರೆ ಬೇರೆ ಅರಸರ ಕಾಲದಲ್ಲಿ ವಿಭಿನ್ನ ವಿನ್ಯಾಸ, ಮಾರ್ಪಾಡುಗಳ ಬಳುವಳಿ ಪಡೆದಿದೆ. ಜೀರ್ಣೋದ್ಧಾರವಾಗಿದೆ.

ದಕ್ಷಿಣ ಭಾರತದಲ್ಲಿಯೇ ಭವ್ಯ ಸಾಮ್ರಾಜ್ಯವನ್ನು ಸ್ಥಾಪಿಸಿ, ತಾವು ವಶಪಡಿಸಿಕೊಂಡ ಪ್ರದೇಶಗಳಿಗೆ ಕೋಟೆಗಳನ್ನು ಕಟ್ಟಿ ಅವುಗಳ ರಕ್ಷಣೆಗೆ ಮೊದಲಾದ ಚಾಲುಕ್ಯರು ದುರ್ಗಗಳನ್ನು ರಚಿಸುವ ವ್ಯವಸ್ಥೆಯಲ್ಲಿಯೇ ಒಂದು ಮೈಲಿಗಲ್ಲನ್ನು ನಿರ್ಮಿಸಿದ್ದಾರೆ. ತಮ್ಮ ಆಡಳಿತ ಕೇಂದ್ರವಾದ ಬಾದಾಮಿಯಲ್ಲಿ ಮೊದಲನೆಯ ಪುಲಿಕೇಶಿಯು ಕ್ರಿ.ಶ.೫೪೩ರಲ್ಲಿ ನಿರ್ಮಿಸಿದ ಗಿರಿದುರ್ಗ ಈ ಮಾತಿಗೆ ಸಾಕ್ಷಿಯಾಗಿದೆ.

ಬಾದಾಮಿಯ ಎತ್ತರದ ಗುಡ್ಡದ ಮೇಲೆ ದೂರದಿಂದಲೇ ಕೋಟೆಯ ಭವ್ಯ ದೃಶ್ಯ ಕಾಣುವುದು. ಕೋಟೆಯನ್ನು ಪ್ರವೇಶಿಸುವಾಗ ಸಿಗುವ ಮೊದಲನೆಯ ಬಾಗಿಲನ್ನು ಕೋಟೆಗೋಡೆ ಮತ್ತು ಪಕ್ಕದಲ್ಲಿರುವ ದೊಡ್ಡ ಬಂಡೆಯ ಮಧ್ಯದಲ್ಲಿ ಕಟ್ಟಿದೆ. ಬಾಗಿಲಿನ ಅಧಿಷ್ಠಾನವು ಮೂಲರೂಪದಲ್ಲದ್ದು, ಉಳಿದ ಭಾಗವು ನಂತರದ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದೆ. ಪಶ್ಚಿಮಾಭಿಮುಖವಾಗಿರುವ ಮೊದಲನೇ ಬಾಗಿಲನಿಂದ ಮುಂದೆ ಹೋದಾಗ, ಪೂರ್ವಾಭಿಮುಖವಾಗಿರುವ ಎರಡನೆಯ ಬಾಗಿಲು ಬರುವದು. ಆದರ ಮುಂದಿನ ಬಯಲಿನಲ್ಲಿ ಪಲ್ಲವರ ಶಾಸನವಿರುವ ಬಂಡೆ ಮತ್ತು ವಸ್ತು ಸಂಗ್ರಹಾಲಯವಿದೆ. ಎರಡನೆಯ ದ್ವಾರದಲ್ಲಿಯ ಪಾವಟಿಗೆಗಳನ್ನು ಹತ್ತಿ ಮೇಲೆಕ್ಕೆ ಹೋದಂತೆ ಎರಡೂ ಬದಿಗೆ ೫೦-೬೦ ಮೀಟರಗಳಷ್ಟು ಎತ್ತರವಾದ ಬಂಡೆಗಳು ಸ್ವಾಭಾವಿಕವಾದ ಗೋಡೆಗಳಂತೆ ಕಾಣುತ್ತವೆ. ಇವುಗಳ ಸಂದಿಯಲ್ಲಿ ಮೂರನೆ ದ್ವಾರ ಇದೆ. ಬಾಗಿಲೊಳಗೆ ಎರಡೂ ಬದಿಗೆ ಕಟ್ಟೆಗಳಿವೆ. ಎಡಭಾಗದ ಬಂಡೆಯ ಮೇಲೆ ಕೋಟೆ ಗೋಡೆಗೆ ಹತ್ತಿರದಲ್ಲಿ ಎರಡು ಕಾವಲು ಗೋಪುರಗಳನ್ನು ಮಂಟಪ ಆಕಾರದಲ್ಲಿ ಕಟ್ಟಲಾಗಿದೆ. ಇವುಗಳಲ್ಲಿ . ಒಂದು ಎರಡು ಮಹಡಿಯದು. ಒಂದೇ ಮಹಡಿಯುಳ್ಳ ಮಂಟಪದ ಕೆಳಗಿನ ಬಂಡೆಯನ್ನು ಖಂಡರಿಸಿ ಆನೆಗಳ ಶಿಲ್ಪವನ್ನು ಕೆತ್ತಿ, ಆನೆಗಳು ಮಂಟಪವನ್ನು ಹೊತ್ತು ನಿಂತಂತೆ ಕಾಣುತ್ತವೆ.

ಈದ್ವಾರದಿಂದ ಮತ್ತೆ ಮೆಟ್ಟಲುಗಳನ್ನು ಹತ್ತಿ ಉತರಕ್ಕೆ ಸಾಗಿ, ಪಶ್ಚಿಮದಿಕ್ಕಿಗೆ ಹೋದಾಗ, ನಾಲ್ಕನೇ ದ್ವಾರಬಾಗಿಲು ಎದುರಾಗುತ್ತದೆ. ಈ ಬಾಗಿಲಿನಲ್ಲಿ ಬಾದಾಮಿ ಚಾಲುಕ್ಯರ ಕಾಲದ ಶೈವ ದ್ವಾರಪಾಲಕರ ಎರಡು ದೊಡ್ಡ ಮೂರ್ತಿಗಳಿವೆ. ಬಾಗಿಲ ಮೇಲೆ ಕಮಾನು ಮತ್ತು ಬಂಧೂಕ ಕಿಂಡಿಗಳಿವೆ, ಈ ದ್ವಾರಬಾಗಿಲ ಮಗ್ಗಲಿರುವ ಉಪಮಾರ್ಗದಿಂದ ಮೇಲಕ್ಕೆ ಸುಮಾರು ೧೦೦ ಮೀಟರಿನಷ್ಟು ದೂರದಲ್ಲಿಯ ಬಂಡೆಗಲ್ಲ ಮೇಲೆ ಬಾದಾಮಿ ಕೋಟೆಯ ಶಾಸನ ದೊರೆಯುತ್ತದೆ. ಬಾಗಿಲಿನ ಎದುರಿಗೆ ಇದೇ ಕಾಲದ ಆಯತಾಕಾರದ ಕಣಜವಿದೆ. ಇಲ್ಲಿಂದ ದಕ್ಷಿಣಕ್ಕೆ ಕೆಳಗಿನ ಶಿವಾಲಯವಿದೆ. ಇದು ಬಾದಾಮಿ ಚಾಲುಕ್ಯರ ಅಧಿದೇವತೆ. ವಾತಾಪಿಗಣಪತಿಯ ದೇವಾಲಯ ಆಗಿರಬೇಕು ಎಂದು ವಿದ್ವಾಂಸರ ಊಹೆ. ಉತ್ತರಕ್ಕೆ ಸಾಗಿ, ಪಶ್ಚಿಮಕ್ಕೆ ತಿರುಗಿದಾಗ ಕೋಟೆಯಲ್ಲಿ ಟಿಪ್ಪುಸುಲ್ತಾನನ ಕಾಲದ ವರ್ತುಲಾಕಾರದ ಕೊತ್ತಳವಿದೆ. ಇದನ್ನು 'ಝುಂಡಾ ಬತೇರಿ' ಯೆಂದು ಕರೆಯುವರು. ಇಲ್ಲಿ ಈಗಲೂ ಸ್ವಾತಂತ್ರ್ಯೋತ್ಸವ ದಿನಾಚರಣೆಯಂದು ಧ್ವಜಾರೋಹಣ ನಡೆಯುವುದು. ಇಲ್ಲೊಂದು ಚಿಕ್ಕ ತೋಪು ಇದೆ. ಕೊತ್ತಳದ ಬಾಗಿಲಿನ ಪಕ್ಕದಲ್ಲಿ ಎರಡು ಬಂಡೆಗಳ ಮಧ್ಯದಲ್ಲಿ ಕಟ್ಟಿದ ಮದ್ದಿನ ಮನೆ ಇದೆ. ಕೊತ್ತಳದ ಮತ್ತೊಂದು ಬದಿಗೆ ದೊಡ್ಡವೇದಿಕೆಯಿದ್ದು, ಆದರ ಮೇಲೆ ಮತ್ತೊಂದು ಚಿಕ್ಕ ವೇದಿಕೆ ಇದೆ. ದಾರಿ ಮುಂದೆ ಉತ್ತರಕ್ಕೆ ಸಾಗಿ, ಪೂರ್ವಕ್ಕೆ ತಿರುಗಿ ಐದನೇ ಬಾಗಿಲಿಗೆ ಹೋಗುತ್ತದೆ.

ಐದನೇ ದ್ವಾರ ಬಾಗಿಲಲ್ಲಿ ಅಲಂಕಾರ ರಹಿತವಾದ ದಪ್ಪ ಕಲ್ಲಿನ ಬಾಗಿಲವಾಡವಿದೆ.

ಬಾಗಿಲನ್ನು ದಾಟ ಮೇಲೆ ಹೋದಾಗ, ಬೆಟ್ಟದ ತುದಿಯ ಬಯಲು ಪ್ರದೇಶ ಬರುವುದು. ಬಾಗಿಲ ಹತ್ತಿರವಿರುವ ಬಾವಿ ಮತ್ತು ಶಿವಾಲಯ ಮಾತ್ರ ಚಾಲುಕ್ಯರ ಕಾಲದವು. ಉಳಿದ ಕಟ್ಟಡಗಳ ೧೮ನೇಯ ಶತಮಾನದವು. ಬೆಟ್ಟದ ಮಧ್ಯದಲ್ಲಿ ಅರಮನೆಯಂತಹ ದೊಡ್ಡ ಕಟ್ಟಡದ ಅವಶೇಷಗಳವೆ. ಆಯತಾಕಾರದ ಒಂದು ಕಟ್ಟಡವನ್ನು 'ಟಿಪ್ಪೂಸುಲ್ತಾನನ ಖಜಾನೆ' ಎಂದು ಕರೆಯವರು. ಮುಸ್ಲಿಮ್ ಶೈಲಿಯಲ್ಲಿರುವ ಈ ಕಟ್ಟಡದಲ್ಲಿ ಬಂಡೆಯಲ್ಲಿ ಕೊರೆದು ಮಾಡಿದ ಆಳವಾದ ಆಯತಾಕಾರದ ಎರಡು ಗುಂಡಿಗಳಿವೆ. ಬೆಟ್ಟದ ಮೇಲೆ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿ ೧೮ನೇ ಶತಮಾನದ ಒಳಕೋಟೆಯಿದೆ. ಈಶಾನ್ಯ ಮೂಲೆಯಲ್ಲಿದ್ದ ಬಾಗಿಲು ಬಿದ್ದು ಹೋಗಿದೆ. ಇಲ್ಲಿಂದ ಕೆಳಗಿಳಿಯಲು ಮೆಟ್ಟಲುಗಳಿವೆ. ಬಾಗಿಲ ಹತ್ತಿರ ವರ್ತುಲಾಕಾರದ ಮತ್ತೊಂದು ಕಣಜವಿದೆ. ಬಾಗಿಲಿನ ದಕ್ಷಿಣಕ್ಕೆ ಬಂಡೆಯ ಮೇಲೆ ವರ್ತುಲಾಕಾರದ ಕೊತ್ತಳವಿದೆ. ಬಂಡೆಯ ಮೇಲೆ ಇರುವ ಆಂಜನೇಯನ ಶಿಲ್ಪಕ್ಕೆ ಬತ್ತೀರಪ್ಪನೆಂದು ಕರೆಯುವರು. ಬೆಟ್ಟದ ಪೂರ್ವಭಾಗದಲ್ಲಿ ಕರೆಯವರೆಗೆ ಕಟ್ಟಿರುವ ಕೋಟೆಯಲ್ಲಿ ವರ್ತುಲಾಕಾರದ ಕೊತ್ತಲಗಳಿವೆ. ಇಲ್ಲಿಯ ದೊಡ್ಡ ಬಂಡೆಯ ಮೇಲಿರುವ ಕ್ರಿ.ಶ. ೬ನೇ ಶತಮಾನದ ಕಪ್ಪೆ ಅರಭಟ್ಟನ ಶಾಸನ ಮೈನವಿರೇಳಿಸುತ್ತದೆ-

''ಸಾಧುಗೆ ಸಾದು ಮಾಧುರ್ಯಂಗೆ ಮಾಧುರ್ಯಂ

ಬಾದಿಪ್ಪಕಲಿಗೆ ಕಲಿಯುವ ವಿಪರೀತನ್

ಮಾಧವ ನೀ ತನ್ನೆರನಲ್ಲ...''

ಸಜ್ಜನಿಕೆಯಲ್ಲಿ ಸುಜನತನ, ಮಾಧುರ್ಯದಲ್ಲಿ ಮಧುರತ್, ಕಲಿತನದಲ್ಲಿ ಕಲಿಕಾಲರಾಗಿ ಭವ್ಯ ಶಿಲ್ಪಕಲೆಯನ್ನು ನೀಡಿ ಅಜರಾಮರರಾದ ಚಾಲುಕ್ಯರು ಅಭೇದ್ಯ ರಕ್ಷಣಾ ವ್ಯವಸ್ಥೆಯನ್ನು ನೀಡಿ ದುರ್ಗಗಳ ಇತಿಹಾಸದಲ್ಲಿಯೂ ತಮ್ಮದೆ ಆದ ಸ್ಥಾನವನ್ನು ಪಡೆದಿದ್ದಾರೆ.

ಹಾದಿ ತಪ್ಪಿಸುವ ತಿರುವುಗಳು, ಕಂದಕಗಳು, ಕೊತ್ತಲಗಳು, ಬೀಳುವಂತೆ ನಿಂತ ಭಯಂಕರ ಬಂಡೆಗಳು ದಂಡೆತ್ತಿ ಬಂದ ವೈರಿಗಳ ಎದೆಯಲ್ಲಿ ನಡುಗು ಹುಟ್ಟಿಸುತ್ತಿದ್ದವು. ವೈರಿಗಳ ದಂಗಾ ಬಲ ಉಡುಗಿ ಹೋಗುತ್ತಿತ್ತು. ಜನಪದರು ಹಾಡಿರುವ ತ್ರಿಪದಿಯೂ ಇದನ್ನೇ ಸಾರಿ ಹೇಳುತ್ತದೆ-

'' ದಂಡೆತ್ತಿ ಬಂದವರು ದಂಗಾಗಿ ಹೋಗ್ಯಾರು

ಬಾದಾಮಿ ಭದ್ರಕೋಟೆಯ ಕಾಣುತ್ತ

ಚಾಲುಕ್ಯರಿಗೆ ಶರಣು ಆಗ್ಯಾರೊ।''

ಬೆಟ್ಟ ಮತ್ತು ಕೆರೆಯ ಮಧ್ಯದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹೋಗುವ ಮೂರು ಕೋಟೆ ಗೋಡೆಗಳಿವೆ. ಮೊದಲನೆಯದು ಕೆರೆಯ ದಂಡೆಯಲ್ಲಿದೆ, ಎರಡನೆಯದು ಮಲ್ಲಿಕಾರ್ಜುನ ದೇವಾಲಯದ ಪಕ್ಕದಲ್ಲಿದೆ. ಮೂರನೆಯದು ವಿಜಯನಗರ ಕಾಲದ್ದು. ಕೆರೆಯ ಪಶ್ಚಿಮ

ದಂಡೆಯುದ್ದಕ್ಕೂ ಇರುವ ಕೋಟೆಯನ್ನು ಉತ್ತರ ಮತ್ತು ದಕ್ಷಿಣ ಬೆಟ್ಟಗಳ ಮಧ್ಯದಲ್ಲಿ ಕಟ್ಟಿದೆ. ಉತ್ತರ ಬೆಟ್ಟದ ಪಶ್ಚಿಮ ಅಂಚಿನಲ್ಲಿರುವ ಮಾಲಗಿತ್ತಿ ಶಿವಾಲಯದ ಹತ್ತಿರದಿಂದ ಪ್ರಾರಂಭವಾಗುವ ಮತ್ತೊಂದು ಕೋಟೆ ದಕ್ಷಿಣ ದಿಕ್ಕಿಗೆ ಸಾಗಿ ಕೆರೆಯ ವಾಯುವ್ಯ ಮೂಲೆಯನ್ನು ಸೇರುತ್ತದೆ. ಈ ಕೋಟೆಯ ಒಳ ಮತ್ತು ಹೊರಭಾಗಗಳಲ್ಲಿ ಮನೆಗಳನ್ನು ಕಟ್ಟಿರುವುದರಿಂದ ಕೋಟೆ ಅಲ್ಲಲ್ಲಿ ನಾಶವಾಗಿದೆ.

ದಕ್ಷಿಣ ಬೆಟ್ಟದ ಮೇಲೆ ೧೮ನೇ ಶತಮಾನದ ಕೋಟೆಯಿದೆ. ಇದನ್ನು ಬೆಟ್ಟದ ಪಶ್ಚಿಮ ತುದಿಯಲ್ಲಿ ಕಟ್ಟಲಾಗಿದೆ. ಬೆಟ್ಟದ ಬೃಹದಾಕಾರದ ಬಂಡೆಗಳ ಮಧ್ಯದಲ್ಲಿ ಕಟ್ಟಿದ ಮೆಟ್ಟಲುಗಳು ಎರಡು ಬಾಗಿಲುಗಳನ್ನು ದಾಡಿದ ಮೇಲೆ ಬೆಟ್ಟದ ತುದಿಯನ್ನು ತಲುಪುತ್ತವೆ. ಚಿಕ್ಕ ಕಲ್ಲು ಮತ್ತು ಗಾರೆಯಿಂದ ಕಟ್ಟಿದ ಈ ಕೋಟೆಯಲ್ಲಿ ವರ್ತುಲಾಕಾರದ ಕೊತ್ತಲಗಳಿವೆ. ಒಂದು ಕೊತ್ತಳದ ಮೇಲೆ ಒಂದು ತೋಪು ಇದೆ. ಈ ಕೋಟೆಯು ಗುಹಾಂತರ ದೇವಾಲಯಗಳಿರುವ ಬಂಡೆಯ ಮೇಲಿದೆ.

ಹಾಗೆ ನೋಡಿದರೆ ಈ ಗಿರಿದುರ್ಗವನ್ನು ಬೇರೆ ಬೇರೆ ಅರಸರು ಆಗಾಗ ನವೀಕರಣ ಗೊಳಿಸಿದ ಕುರುಹುಗಳು ನೋಡಲು ಸಿಗುತ್ತವೆ. ೯ನೇ ಶತಮಾನದಲ್ಲಿ ರಾಷ್ಟ್ರಕೂಟರು, ೧೫-೧೬ನೇ ಶತಮಾನದಲ್ಲಿ ವಿಜಯನಗರ ಅರಸರು, ೧೮ನೇಯ ಶತಮಾನದಲ್ಲಿ ಹೈದರಅಲಿ ಟಿಪ್ಪುಸುಲ್ತಾನರು ಈ ಗಿರಿದುರ್ಗವನ್ನು ನವೀಕರಣಗೊಳಿಸಿದರು. ಕ್ರಿ.ಶ.೧೫೩೨ರಲ್ಲಿ ಅಚ್ಯುತರಾಯನ ಸೇನಾಪತಿ ಚಿನ್ನಪ್ಪನಾಯಕನ ಆದೇಶದ ಮೇರೆಗೆ ಕುಮಾರ ಚಿಕ್ಕಚಿನ್ನಪ್ಪನಾಯಕನು ಬಾದಾಮಿ ಕೋಟೆಯ ಜೀರ್ಣೋದ್ಧಾರ ಮಾಡಿದನು. ಕ್ರಿ.ಶ.೧೫೪೩ರಲ್ಲಿ ಸದಾಶಿವರಾಯನ ಸೇನೆಯಲ್ಲಿದ್ದ ಹಡಪದ ಎರಕೃಷ್ಣಪ್ಪನಾಯಕನು ಒಂದು ಹುಡೆಯನ್ನು ಕಟ್ಟಿಸಿದನು. ಅದೇ ವರ್ಷ ಕೊಂಡರಾಜ ಮಹಾರಸನು ಒಂದು ಕೊತ್ತಳವನ್ನು ನಿರ್ಮಿಸಿದನು. ೧೬ನೇ ಶತಮಾನದ ಒಂದು ಶಾಸನವು ಬೈಯಪೇಂದ್ರನು ಅಭೇದ್ಯ ಕೋಟೆಯನ್ನು ನಿರ್ಮಿಸಿರುವದನ್ನು ತಿಳಿಸುತ್ತದೆ. ಮುಂದೆ ಬಾದಾಮಿ ಟಿಪ್ಪೂಸುಲ್ತಾನನ ವಶವಾದಾಗ ಕೋಟೆಯ ಜೀರ್ಣೋದ್ಧಾರವಾಯಿತು. ದಕ್ಷಿಣ ಬೆಟ್ಟದ ಮೇಲಿನ ಕೋಟೆಯ ನಿರ್ಮಾಣವು ಇದೇ ಕಾಲದಲ್ಲಿ ಆಯಿತು.

ಈ ರೀತಿಯಾಗಿ ಈ ದುರ್ಗವು ರಚನಾಕ್ರಮದಲ್ಲಿ ೬ನೇ ಶತಮಾನದಿಂದ ೧೮ನೇ ಶತಮಾನದವರೆಗೆ ಬದಲಾವಣೆ ಹೊಂದುತ್ತಲೇ ಬಂದಿದೆ. ಆಯಾ ಕಾಲದಲ್ಲಿದ್ದ ಯುದ್ಧ ತಂತ್ರ ಆಯುಧಗಳ ಬಳಕೆಗಳಿಗೆ ತಕ್ಕಂತೆ ಇಲ್ಲಿ ಉಂಟಾದ ಮಾರ್ಪಾಡುಗಳು ಅಭ್ಯಾಸಿಗಳಿಗೆ ಉತ್ತಮ ಆಕರಗಳಾಗಿವೆ.

ವಾಸ್ತುಶಿಲ್ಪ ಪ್ರಯೋಗಾಲಯಃ ಐಹೊಳೆ

ದಕ್ಷಿಣ ಭಾರತದಲ್ಲಿ ೧೩ನೇ ಶತಮಾನದವರೆಗೂ ಪ್ರಬಲ ವಾಣಿಜ್ಯ ಕೇಂದ್ರವಾಗಿದ್ದು, ''ಅಯ್ಯಹೊಳೆ ಐಯ್ಯಾನ್ವರು'' ಎಂದು ಕ್ರಮೇಣ ಪ್ರಸಿದ್ಧವಾದ ಸಂಘವು ಇದ್ದುದು ಐಹೊಳೆಯಲ್ಲಿ. ಈಗ ಇದು ಹಾಳುಬಿದ್ದ ಹಳ್ಳಿ. ಚಾಲುಕ್ಯರ ಪೂರ್ವದಲ್ಲಿಯೇ ಸುಮಾರು ೧-೨ ಶತಮಾನದ ಹೊತ್ತಿಗಾಗಲೆ ಇದು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತೆಂದು ೨ನೇ ಶತಮಾನದ ಮಧ್ಯಭಾಗದ 'ಟಾಲೋಮಿಯ ಎ ಗೈಡ್ ಟು ಜಿಯಾಗ್ರಫೀ' ಎಂಬ ಗ್ರಂಥದಿಂದ ತಿಳಿಯುತ್ತದೆ. ಐಹೊಳೆ ಒಂದು ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತೆಂದು ಈ ಊರಿನ ಶಾಸನಗಳಲ್ಲಿಯ 'ಆರ್ಯಜನ' ಸಮುದಯೋದಿತ ವರಾರ್ಯ ಸುರಾಧಿಷ್ಠಾನದ ಶ್ರೀ. ಮಹಾ ಚಾತುರ್ವಿದ್ಯ ಸಮುದಯಂ'' ಎಂಬ ವರ್ಣನೆಯಿಂದ ತಿಳಿಯುತ್ತದೆ.

ಕಲ್ಯಾಣ ಚಾಲುಕ್ಯರ ೬ನೇ ವಿಕ್ರಮಾದಿತ್ಯನ ಕಾಲಕ್ಕೆ ಇದು ಮಹಾ ಅಗ್ರಹಾರವಾಗಿತ್ತು. ಈ ಊರನ್ನು 'ಶ್ರೀಮಾನ್ ಮಹಾಕಾಶಿ ಅಯ್ಯ ಒಳೆ' ಎಂದು ೧೧೩೬ರ ಒಂದು ಶಾಸನದಲ್ಲಿ ವರ್ಣಿಸಲಾಗಿದೆ. ಇಮ್ಮಡಿ ಪುಲಕೇಶಿಯ ಆಸ್ಥಾನದ ಶ್ರೇಷ್ಠ ಕವಿಯಾಗಿದ್ದ ರವಿಕೀರ್ತಿಯ ಊರು ಐಹೊಳೆ ಇವನು ಕಟ್ಟಿಸಿದ 'ಜಿನೇಂದ್ರಾಲಯ' ಶಾಸನ ಪ್ರಶಸ್ತಿಯನ್ನು ಇವನೇ ರಚಿಸಿದ್ದು ಇದು ಒಂದು ಪ್ರೌಢ ಸಂಸ್ಕೃತ ಕಾವ್ಯ. ಇದರಲ್ಲಿ ತನ್ನನ್ನೂ 'ಕವಿತಾ ಶ್ರೀತ ಕಾಲಿದಾಸ ಭಾರವಿ ಕೀರ್ತಿ' ಎಂದು ಹೊಗಳಿಕೊಂಡಿದ್ದಾನೆ. ಕಾಳಿದಾಸನ ಕಾಲಮಾನ ನಿರ್ಧರಿಸುವ ಶಾಸನವೆಂದೇ ಇದು ಪ್ರಖ್ಯಾತಿ ಪಡೆದಿದೆ.

ಇದು ಚಾಲುಕ್ಯ ವಾಸ್ತು ಶಿಲ್ಪದ ತವರು, (ಕ್ರಿ.ಶ. ೪೫೦-೬೫೦). ವಾಸ್ತುಶಿಲ್ಪದ ಪ್ರಯೋಗಾಲಯ. ಇಲ್ಲಿಯ ಚಾಲುಕ್ಯ ವಾಸ್ತುಶೈಲಿ ಹಾಗೂ ದೇವಾಲಯದ ರಚನೆಗಳು ಆರಂಭಿತ ಹಂತದವು. ಚಾಲುಕ್ಯರ ಮೊದಲ ದೊರೆಯಿಂದ ಸ್ಥಾಪನೆಗೊಂಡ ಐಹೊಳೆ ಗುಪ್ತರಿಂದ ಉಧ್ವಸ್ತಗೊಂಡ ಬಳಿಕ ರಚನೆಗಳಿಗೆ ಸಾಕ್ಷಿಯಾಯಿತು. ದ್ರಾವಿಡ ಶಿಲ್ಪದ ಅನೇಕ ಅಂಶಗಳು ಈ ಶಿಲ್ಪಗಳಲ್ಲಿ ಸೇರಿಕೊಂಡಿವೆ. ಸುಮಾರು ೭೦ ದೇವಾಲಯಗಳಲ್ಲಿ ಈ ಅಂಶ ಸ್ಪಷ್ಟ.

ದೇವಾಲಯಗಳು, ಗಾತ್ರದಲ್ಲಿ ಕಿರಿದಾದರೂ, ಮಧುರೈ (ತಮಿಳುನಾಡು) ನ 'ಗೋಪುರಂ' ಹಾಮೂ ಭುವನೇಶ್ವರ (ಓರಿಸ್ಸಾ)ದ ಗುಡಿಗಳ ಮೂಲ ಮಾದರಿಗಳಂತೆ ಕಾಣುತ್ತವೆ. ಈ ದೇವಾಲಯಗಳು ಅನಂತರದ ಶತಮಾನಗಳಲ್ಲಿ ಹೊಸ ರಚನೆಗಳನ್ನು ಮೈಗೂಡಿಸಿಕೊಂಡು ಬೆಳೆದುದನ್ನು ಕಾಣಬಹುದು. ವಾಸ್ತುಶಿಲ್ಪಜ್ಞರು ಐಹೊಳೆಯನ್ನು 'ಭಾರತದ ದೇಗುಲಗಳ ತೊಟ್ಟಿಲು' ಎಂದು ಕರೆದಿದ್ದಾರೆ. ಇಲ್ಲಿ ಬೇರೆಬೇರೆ ಕಾಲದಲ್ಲಿ ಕಟ್ಟಿದ ಪ್ರಾಚೀನ ದೇವಾಲಯಗಳು ಇವೆ. ಐಹೊಳೆಯ ದೇವಾಲಯಗಳು ಕ್ರಿ.ಶ. ೪೫೦ ರಿಂದ ೧೨ನೇ ಶತಮಾನದ ವರೆಗೂ ನಿರ್ಮಾಣಗೊಂಡಿವೆ. ಐಹೊಳೆ ದೇಗುಲಗಳನ್ನು ಕೆಳಗಿನಂತೆ ವಿಂಗಡಿಸಬಹುದು-

(೧) ಒಂದು ಚೌಕು ಅಥವಾ ಚಚೌಕು ಕಟ್ಟಡದಲ್ಲಿ ಆದಕ್ಕೆ ಮುಂದೆ ಮುಖಮಂಟಪ

(ಇರಬಹುದು ಅಥವಾ ಇರಲಿಕ್ಕಿಲ್ಲ) ಹಿಂದಿನ ಗೋಡೆಯ ಮಧ್ಯದಲ್ಲಿ ಗರ್ಭಗುಡಿಯನ್ನು ನಿರ್ಮಿಸಿರುವದು ಉದಾಃ ಕೊಂತಗುಡಿ, ಲಾಡಖಾನಗುಡಿ.

(೨) ಒಂದು ಚೌಕದಲ್ಲಿ ಪ್ರತ್ಯೇಕವಾಗಿ ನಿಂತ ಗರ್ಭಗುಡಿಯನ್ನು ನಿರ್ಮಿಸಿದ್ದು ಇದಕ್ಕೆ ಪ್ರದಕ್ಷಣೆ ಹಾಕಲು ಬರುವುದು. ಉದಾಃ ಗೌಡರಗುಡಿ.

(೩) ಮಂಟಪದಿಂದ ಹಿಂದೆ ಪ್ರತ್ಯೇಕವಾಗಿ ನಿಂತ ಗರ್ಭಗುಡಿ, ಇದರ ಮುಂದೆ ಮುಖಮಂಟಪ ಇರಬಹುದು ಅಥವಾ ಇರಲಿಕ್ಕಿಲ್ಲ. ಉದಾಃ ನಾರಾಯಣ ಗುಡಿ, ತಾರಬಸಪ್ಪನಗುಡಿ, ಹುಚ್ಚಪ್ಪಯ್ಯನ ಮಠ, ಗಳಗನಾಥ ಗುಡಿಯ ಸಮುಚ್ಚಯದಲ್ಲಿಯ ಒಂದು ಗುಡಿ.

(೪) ಹಿಂಭಾಗದಲ್ಲಿ ಅರ್ಧವರ್ತುಲಾಕಾರದ ಮಂಟಪದಲ್ಲಿ ಅದೇ ಪ್ರಕಾರವಾಗಿದ್ದ ಗರ್ಭಗುಡಿ, ಮತ್ತು ಮಂಟಪದ ಆಕಾರದಲ್ಲಿದ್ದ ಪ್ರದಕ್ಷಣಾಪಥ, ಉದಾಃ ದುರ್ಗಗುಡಿ.

(೫) ಮುಖ ಮಂಟಪ, ಮಂಟಪದಲ್ಲಿ ಗರ್ಭಗುಡಿ, ಮತ್ತು ಗರ್ಭಗುಡಿಯ ಸುತ್ತಲೂ ಇರುವ ಪ್ರದಕ್ಷಣಾಪಥ ಉದಾಃ ಹುಚ್ಚಮಲ್ಲಿಗುಡಿ, ಚಿಕ್ಕಿಗುಡಿ.

(೬) ಮಂಟಪ, ಅಂತರಾಳವಿರುವ ಗರ್ಭಗುಡಿ, ಉದಾಃ ಗಳಗನಾಥ ಗುಂಪಿನಲ್ಲಿರುವ ಒಂದು ಗುಡಿ, ರಾವಳಫಡಿ ಮತ್ತು ಬೌದ್ಧಗುಹೆ.

(೭) ತ್ರಿಕೂಟಾಚಲಗಳುಃ- ತ್ರ್ಯಂಬಕೇಶವನಗುಡಿ, ಮದ್ದಿನಗುಡಿ, ಗಳಗನಾಥ ಗುಡಿಯ ಗುಂಪಿನಲ್ಲಿಯ ಒಂದು ಗುಡಿ, ಜೈನಗುಡಿಗಳು, ಚರಂತಿಮಠದಲ್ಲಿಯ ಜೈನ ಗುಡಿ ಇತ್ಯಾದಿ..

ಐಹೊಳೆಯ ಗುಡಿಗಳನ್ನು ಹೊರಮಗ್ಗಲು ಹೊಡೆದ ಕಲ್ಲಿನ ತುಂಡುಗಳನ್ನು ಒಂದರ ಮೇಲೊಂದಿಟ್ಟು ಕಟ್ಟಿದ್ದಾರೆ. ಈ ರೀತಿ ಹೊಡೆದ ಕಲ್ಲುಗಳ ಸಾಲುಗಳನ್ನು ಗೋಡೆಯ ಹೊರಮಗ್ಗಲು ಮತ್ತು ಒಳಮಗ್ಗಲು ಇಟ್ಟು ಅವುಗಳ ನಡುವಿನ ಸ್ಥಳವನ್ನು ಬಿಡಿಕಲ್ಲುಗಳನ್ನು ಹಾಕಿ ತುಂಬುತ್ತಿದ್ದರು. ಈ ಸಂಗತಿಯನ್ನು ಬಿದ್ದ ಕಲ್ಲಿನ ಕಟ್ಟಡಗಳಿಂದ ನಾವು ಅರಿತು ಕೊಳ್ಳಬಹುದಾಗಲದೆ.

ಐಹೊಳೆಯಲ್ಲಿ ಹಿಂದಿನ ಕಾಲಕ್ಕೆ ತುರುಗಾಳಗಗಳು ಆಗುತ್ತಿದ್ದವೆಂದು ಅಲ್ಲಿಯ ವೀರಗಲ್ಲುಗಳು ನಿದರ್ಶಿಸುತ್ತಿವೆ. ಮೇಗುಟಿ ಗುಡಿಯ ಪೂರ್ವಕ್ಕೆ ಇರುವ ಗುಡ್ಡದ ಮೇಲಿನ ಬಯಲಿನಲ್ಲಿ ಕೆಲವು ಬೃಹಚ್ಛಿಲಾ ಗೋರಿಗಳಿವೆ. ಬೃಹಚ್ಛಿಲಾಗಳನ್ನು ಕ್ರಿ.ಪೂ. ೩ನೇ ಶತಮಾನದಿಂದ ಕಟ್ಟುತ್ತಾ ಬಂದಿದ್ದಾರೆ. ಇಲ್ಲಿಯ ಬೃಹಚ್ಛಿಲಾಗಳು ಕ್ರಿ.ಶ. ೬,೭ನೇ ಶತಮಾನದಲ್ಲಿ ನಿರ್ಮಿತವಾಗಿವೆ.

ಮೊತ್ತಮೊದಲು ದೇವಾಲಯಗಳ ರಚನೆ ಲಘುತೆ, ಸಹಜತೆ ಮತ್ತು ನಿರಾಡಂಬರದಿಂದ ಕೂಡಿಟ್ಟಿತು. ಒಂದು ಪಡಶಾಲೆ ಅಥವಾ ಮಂಟಪ, ಪಕ್ಕದಲ್ಲಿ ದೇವವಿಗ್ರಹಕ್ಕಾಗಿ ಒಂದು ಗೂಡು, ಇಷ್ಟು ಅದರ ಮೂಲ ಸ್ವರೂಪ. ಬರಬರುತ್ತ ಸುಖನಾಸಿ, ಮಂಟಪ,

ಮಧ್ಯರಂಗ, ಮೊದಲಾದ ಅಂಗೋಪಾಂಗಗಳು ಸೇರ್ಪಡೆಯಾಗುತ್ತ ಅದರ ವಿನ್ಯಾಸವು ವೈವಿಧ್ಯ, ವಿಸ್ತಾರ ಮತ್ತು ಔನ್ನತ್ಯದಿಂದ ಅಭಿವೃದ್ಧಿಗೊಂಡಿತು. ಐಹೊಳೆಯಲ್ಲಿ ಎಪ್ಪತ್ತು ದೇಗುಲಗಳಿವೆ. ಇವು ಮೇಲೆ ವಿವೇಚಿಸಿದ ಶಿಲ್ಪರಚನೆಯ ಒಲವು - ನಿಲವುಗಳನ್ನು ಉದಾಹರಿಸಲು ಏರ್ಪಡಿಸಿದ ಪ್ರದರ್ಶನದಂತೆ ಇಂಬುಗೊಂಡಿವೆ.

ಐಹೊಳೆಯ ಗುಡಿಗಳಲ್ಲಿ ಪುರಾತನವಾದುದು ಲಾಡಖಾನ ದೇಗುಲ (ಕ್ರಿ.ಶ. ೫೫೦). ಇದರ ರಚನೆ ಐದನೆಯ ಶತಮಾನದ ಮಧ್ಯ ಕಾಲದ್ದೆಂದು, ಊಹಿಸಲಾಗಿದೆ. ಮುಂದುಗಡೆ ಪ್ರವೇಶದ್ವಾರದ ಕಂಬಗಳ ಮೇಲೆ ಗಂಗಾ-ಯಮುನಾ ನದೀ ವಿಗ್ರಹಗಳನ್ನು ಕಾಣುತ್ತೇವೆ. ಆ ಬಳಿಕ ಐವತ್ತು ಚೌರಸ ಅಡಿಯ ಒಂದು ವಿಶಾಲ ಮಂಟಪ, ಇದರ ಆಚೆಯ ತುದಿಗೆ ಗರ್ಭಗೃಹ, ಇದು ಪ್ರತ್ಯೇಕವಾಗಿಲ್ಲ; ಮಂಟಪ ಒಂದು ಅಂಗ ಮಾತ್ರ. ಕಂಬಗಳಿಗೆ ಕೆತ್ತನೆಯ ಅಲಂಕಾರವಿದೆ. ಎತ್ತರವಲ್ಲದ ಚಾವಣಿಗೆ ಹಲಗೆಗಲ್ಲುಗಳನ್ನು ಹೊದಿಸಿದೆ. ಮೇಲಂತಸ್ತಿನಲ್ಲಿ ಈಚೆಯ ಕಾಲದ ಸೂರ್ಯಮಂದಿರವಿದೆ. ಈ ದೇಗುಲದ ಒಂದು ಮೃಗವಿ ಮನೆಯನ್ನು, ಇನ್ನೊಂದು ಮೈಚೌಘ್ಘರ ಸಭಾಗೃಹವನ್ನು ಸ್ಮರಣೆಗೆ ತರುತ್ತವೆ.

ಸುಮಾರು ಆರನೆಯ ಶತಮಾನದ ರಚನೆಯಾಗಿದ್ದ ವಲಯಾಕೃತಿಯ ದುರ್ಗಾಮಂದಿರವು ಬೇರೊಂದು ಪ್ರಯೋಗವನ್ನು ಸೂಚಿಸುತ್ತದೆ. ಬೌದ್ಧ ಚೈತ್ಯಾಕಾರವನ್ನು ಮಾರ್ಪಡಿಸಿ ಹಿಂದು ದೇವಾಲಯವನ್ನು ರೂಪಿಸುವ ಅನುಕರಣಾತ್ಮಕ ಪ್ರಯತ್ನ ಇಲ್ಲಿದೆ. ಕಂಬದ ಮೇಲೆ ಕೆತ್ತನೆಯ ಕೈವಾಡವಿದೆ. ಶಿಖರವು ಔತ್ತರೇಯ ಪದ್ಧತಿಯದಾಗಿದ್ದು, ಅದನ್ನು ೬ ಮೇಲೆ ಏರ್ಪಡಿಸಿರಬೇಕು. ದುರ್ಗಾಮಂದಿರಕ್ಕಿಂತ ಕಿರಿದೂ ನಿರಾಡಂಬರವೂ ಆದ ಹುಚ್ಚಮಲ್ಲಿಗುಡಿಯಲ್ಲಿ ಗರ್ಭಗೃಹ ಮತ್ತು ಮಧ್ಯ ಮಂಟಪ ನಡುವೆ ಸುಖನಾಸಿ ಅಥವಾ ಅಂತರಾಲವನ್ನು ಜೋಡಿಸುವ ಉಪಕ್ರಮವನ್ನು ಮೊದಲುಬಾರಿ ಕಾಣುತ್ತೇವೆ. ದ್ರಾವಿಡ ಶೈಲಿಯ ಕೊಂತಗುಡಿ ಮೊದಲಾದ ಇನ್ನೂ ಅನೇಕ ಪ್ರಾಚೀನ ದೇವಾಲಯಗಳು ಲಕ್ಷಣೀಯವಾಗಿವೆ.

ಐಹೊಳೆಯಲ್ಲಿ ಈಚೆಯ ಕಾಲದ ದೇವಾಲಯವೆಂದರೆ ಮೇಗುಟಗುಡಿ, ಇದು ಜಿನಾಲಯವಾಗಿದೆ. ಇಮ್ಮಡಿ ಪುಲಕೇಶಿಯ ದಿಗ್ವಿಜಯದ ವೃತ್ತಾಂತವನ್ನು ಕಾವ್ಯಶೈಲಿಯಲ್ಲಿ ವರ್ಣಿಸುವ ರವಿಕೀರ್ತಿಯ ಸುಪ್ರಸಿದ್ಧ ಶಿಲಾಶಾಸನವನ್ನು ಈ ದೇಗುಲದಲ್ಲಿ ಅವಲೋಕಿಸಬಹುದು. ಇದರ ಕಾಲ ಕ್ರಿ.ಶ. ೬೩೪. ಈ ದೇವಾಲಯವು ಶಿಲ್ಪಕಲೆಯಲ್ಲಿ ಈ ಹೊತ್ತಿಗೆ ಉಂಟಾಗಿದ್ದ ಪ್ರಗತಿಯನ್ನು ಪ್ರದರ್ಶಿಸುತ್ತದೆ.

ಐಹೊಳೆಯ ದುರ್ಗಗುಡಿ ಎಲ್ಲ ಗುಡಿಗಳಿಗಿಂತ ರಚನೆಯಲ್ಲಿ ಭಿನ್ನವಾಗಿದೆ. ಇದು ಹಿಂಭಾಗದಲ್ಲಿ ದುಂಡಾಗಿದ್ದು ರಚನೆಯಲ್ಲಿ ಕಾರ್ಲಾ, ಭಾಜಾ ಮೊದಲಾದವುಗಳಲ್ಲಿಯ ಬೌದ್ಧ ಚೈತ್ಯಾಲಯಗಳನ್ನು ಹೋಲುವುದು. ಹಿಂಬದಿಗೆ ಅರ್ಧವೃತ್ತಾಕಾರವಾದ ಇಂಥ ಗುಡಿಗಳ ಹಳೇ ಮಹಾಕೂಟದಲ್ಲಿಯೂ, ತೇರ, ಛಜರ್ಲಾ ಮುಂತಾದ ಊರುಗಳಲ್ಲಿಯೂ ಇರುವವು. ಈ ಗುಡಿಗೆ ಎರಡು ಅಧಿಷ್ಠಾನಗಳಿವೆ. ಹೀಗಿರುವುದರಿಂದ ಗುಡಿಯ ಹೆಚ್ಚು

ಎತ್ತರವಾಗಿರಲು ಅನುಗುಣವಾಗುವದು.

ಈ ಗುಡಿಯ ಇನ್ನೊಂದು ವೈಶಿಷ್ಟ್ಯವೆಂದರೆ - ಗರ್ಭಗುಡಿಯೂ ಸಹ ಅರ್ಧವೃತ್ತಾಕಾರವಾಗಿರುವುದು. ಈ ಗುಡಿಗೆ ಎರಡು ಪ್ರದಕ್ಷಿಣಾ ಪಥಗಳಿವೆ. ಹೊರ ಪ್ರದಕ್ಷಿಣಾಪಥದ ಹೊರಭಾಗದಲ್ಲಿದ್ದ ಮುಂದಿನ ಎಲ್ಲ ಕಂಬಗಳ ಮೇಲೆಯೂ ಆಗಿನ ಕಾಲದ ಸಾಮಾಜಿಕ ಜೀವನವನ್ನು ಮೂರ್ತಿ ಮಂತಾಗಿ ಬಿಂಬಿಸುವಂತೆ ಉಬ್ಬು ಚಿತ್ರಗಳನ್ನು ಕಟೆದು ಶಿಲ್ಪಿಗಳು ತೋರಿಸಿದ್ದಾರೆ. ಈ ಗುಡಿಗೆ ಗರ್ಭಗುಡಿಯ ಮೇಲ್ಭಾಗದಲ್ಲಿ ಪಟ್ಟದಕಲ್ಲಿನ ಪಾಪನಾಥ ಗುಡಿಗೆ ಇದ್ದಂತೆ ಚಿಕ್ಕ ರೇಖಾನಾಗರ ಪ್ರಸಾದ ಶಿಖರವಿರುವದು. ಈ ರೀತಿಯ ಹಲವು ಹತ್ತು ವೈಶಿಷ್ಟ್ಯಗಳಿಂದ ಕೂಡಿದ ಈ ಗುಡಿಗಳನ್ನು ಎಲ್ಲ ಕಲಾಪ್ರೇಮಿಗಳು ಒಂದಿಲ್ಲೊಂದು ರೀತಿಯಿಂದ ಮೆಚ್ಚಿಕೊಳ್ಳುವರು. ಐಹೊಳೆಗೆ ಸಂದರ್ಶನವಿತ್ತವರು ಈ ಗುಡಿಯನ್ನು ನೋಡದಿದ್ದರೆ ಮುಖ ಕಳೆದುಕೊಂಡ ಸುಂದರ ವಿಗ್ರಹವನ್ನು ನೋಡಿದಂತಾಗುವದು. ಅಷ್ಟಿದೆ ಈ ಗುಡಿಯ ಕಲಾವೈಭವ! ಅದು ನೋಡುವವರ ಕಣ್ಮಣಿಯಾಗಿದೆ!!

ಈ ಗುಡಿಯಲ್ಲಿ ಮಿಥುನ ಚಿತ್ರಗಳಿವೆ. ರಾಮಾಯಣದ ದೃಶ್ಯಗಳಿವೆ. ಅಂದಿನ ಸಮಾಜದ ಸಮಗ್ರ ಚಿತ್ರಣವಿದೆ. ಗುಡಿಯ ಪ್ರದಕ್ಷಿಣಾಪಥದ ಬಲಬದಿಯ ಗೋಡೆಯ ಮಾಡುಗಳಲ್ಲಿ ವೃಷಭವಾಹನ ಶಿವ, ನರಸಿಂಹ, ವಿಷ್ಣು, ಮಹಿಷಾಸುರಮರ್ದಿನಿ, ಹರಿಹರನ ಸುಂದರ ಅಲಂಕಾರಿತ ಮೂರ್ತಿಗಳಿವೆ. ದುರ್ಗ ಗುಡಿಯ ಕಾಲ ಸುಮಾರು ಕ್ರಿ.ಶ. ೬೦೦.

ಹುಚ್ಚಿಮಲ್ಲಿ ಗುಡಿಯಲ್ಲಿ ಅನೇಕ ಪ್ರಯೋಗಗಳನ್ನು ಅಂದಿನ ವಾಸ್ತುಶಿಲ್ಪಿಗಳು ಮಾಡಿದ್ದಾರೆ. ದೇಗುಲಕ್ಕೆ ಶಿಖರ ಕೂರಿಸಿದ್ದಾರೆ. ಗರ್ಭಗುಡಿ ಮತ್ತು ಹೊರಮಂಟಪದ ಮಧ್ಯೆ 'ಅಂತರಾಳ' ನಿರ್ಮಿಸಿದ್ದಾರೆ. ಬಾಗಿಲನ್ನು ಚೆಲುವಾದ ಕುಸುರಿನ ಕೆತ್ತನೆಯಿಂದ ಅಲಂಕರಿಸಿದ್ದಾರೆ. ಅನುರಕ್ತ ದಂಪತಿಗಳು, ಆನೆ ಮತ್ತು ಗಂಗೆ-ಯಮುನೆಯರ ಶಿಲ್ಪ ಎರಡೂ ಬದಿಯ ಶಾಖೆಗಳಲ್ಲಿದ್ದರೆ, ಚೌಕಟ್ಟಿನ ಮೇಲಿನ ಅಡ್ಡ ಜಂತಿಯ ಮಧ್ಯದಲ್ಲಿ ಗರುಡನ ಮೂರ್ತಿ, ಬ್ರಹ್ಮ, ನಟರಾಜ, ವಿಷ್ಣು, ಆಕಾಶದಲ್ಲಿ ಹಾರಾಡುವ ಗಂಧರ್ವ ದಂಪತಿಗಳು ಇಲ್ಲಿವೆ. ಹುಚ್ಚಮಲ್ಲಿ ದೇಗುಲ ಆನಂತರದ ಎಲ್ಲಾ ಚಾಲುಕ್ಯ ದೇವಾಲಯಗಳಿಗೂ ಒಂದೂ ರೀತಿಯ 'ಪಡಿಯಚ್ಚಿನ ಮಾದರಿ' ಯಾಗಿವೆಯೆಂದರೆ ಅತಿಶಯೋಕ್ತಿ ಯಾಗಲಿಕ್ಕಿಲ್ಲ.

ಲಾಡಖಾನ ದೇವಾಲಯ ಇಲ್ಲಿಯ ಅತಿ ಹಳೆಯ (ಕ್ರಿ. ಶ.೪೫೦) ದೇವ ಮಂದಿರ. ಈ ವಿಷ್ಣು ದೇವಾಲಯದಲ್ಲಿ ಕೆಲವು ಕಾಲ ಲಾಡಖಾನನೆಂಬ ಸಂತ ವಾಸಿಸುತ್ತಿದ್ದನೆಂದು ದೇವಾಲಯಕ್ಕೆ ಅದೇ ಹೆಸರನ್ನು ಗಟ್ಟಿ ಮಾಡಿದರು. ಇದರ ಕಲಶವನ್ನು ಅಲಂಕಾರವಾಗಿ ಮಾಡಿದ್ದಾರೆ. ಮಂಟಪದ ಕಂಭಗಳ ಮೇಲೆ ಇರುವ ಗಂಗಾ-ಯಮುನಾ ವಿಗ್ರಹಗಳು ಮತ್ತೆ ಮತ್ತೆ ನೋಡುವಂತಿವೆ. ಜ್ಯೋತಿರ್ಲಿಂಗ ಸಮೂಹ, ಹುಚ್ಚಪ್ಪಯ್ಯನ ಗುಡಿ, ತಾರಪ್ಪ ಗುಡಿ,

ಕೊಂತಿ ಗುಡಿ, ಮಲ್ಲಿಕಾರ್ಜುನ ಗುಡಿ, ಮೇಗುಟ ಗುಡಿಗಳು ವಾಸ್ತುಶಿಲ್ಪದ ವಿಕಾಸವನ್ನು, ಒಂದು ಶೈಲಿ ಇನ್ನೊಂದು ಶೈಲಿಯ ಮೇಲೆ ಮಾಡಿದ ಪ್ರಭಾವವನ್ನು, ಸ್ಥಳೀಯ ಶೈಲಿಯ ಮಿಳಿತವನ್ನು ತಿಳಿಸುತ್ತವೆ. ಇಲ್ಲಿ ಬಾದಾಮಿ ಗುಹೆಗಳಲ್ಲಿಯ ಪ್ರತಿರೂಪಗಳನ್ನು ಕಾಣಬಹುದು. ಬಾದಾಮಿಯಲ್ಲಿ ಗುಹೆಗಳನ್ನು ಕೆತ್ತುವ ಪೂರ್ವದಲ್ಲಿ ಶಿಲ್ಪಿಗಳು ಅವುಗಳ ಮಾದಲ್‌ಗಳನ್ನು ಐಹೊಳೆಯಲ್ಲಿ ಮಾಡಿದ್ದು ಸ್ಪಷ್ಟವಾಗಿ ಕಾಣುತ್ತದೆ. ಬಾದಾಮಿಯಲ್ಲಿಯ ಮಾಲಗಿತ್ತಿ ಶಿವಾಲಯ, ಭೂತನಾಥನ ಗುಡಿಗೆ, ಶಿವಾಲಯ ಗುಡಿಗಳಿಗೆ ಇಲ್ಲಿಯ ಗುಡಿಗಳೆ ಆಧಾರವಾಗಿದ್ದವು. ಅದಕ್ಕೆ ಐಹೊಳೆಗೆ 'ವಾಸ್ತುಶಿಲ್ಪ'ದ ಕಾರ್ಯಾಗಾರ ಎಂದು ಕರೆದಿರುವದು ಔಚಿತ್ಯಪೂರ್ಣ.

ವೈವಿಧ್ಯಮಯವಾದ ತಳವಿನ್ಯಾಸ, ಮುಖವಿನ್ಯಾಸ, ವಾಸ್ತುಶಿಲ್ಪಿಗಳ ಅಗಾದ ಪ್ರತಿಭೆಗೆ ದಿವ್ಯ ಸಾಕ್ಷಿಯಾಗಿ ಇಲ್ಲಿಯ ಕಲಾ ದೇಗುಲಗಳು ಸಮಬಾಹು ಚತುರ್ಭುಜ, ವೃತ್ತ, ಅಂಡಾಕೃತಿ, ಗಜಪೃಷ್ಠಾಕೃತಿ, ಮೊದಲಾದ ಸರಳ ವಿನ್ಯಾಸಗಳಲ್ಲಿ ಕೊನೆಯದನ್ನು ದುರ್ಗಾದೇವಾಲಯದಲ್ಲಿ ಮತ್ತು ಇದರ ಎದುರಗಡೆ ಚಿಕ್ಕ ಗುಡಿಯ ಎಡಬದಿಯಲ್ಲಿ ಸುಮಾರು ೧೬ ವರ್ಷಗಳ ಹಿಂದೆ ಶೋಧವಾದ ಶಿವ ದೇವಾಲಯಗಳಲ್ಲಿ ನೋಡಬಹುದು. ಇಂಥ ದೇವಾಲಯಗಳಲ್ಲಿ ಹಿಂಬದಿ ಮಾತ್ರ ಅರ್ಧವೃತ್ತಾಕಾರದಲ್ಲಿರುತ್ತವೆ. ಈ ವಿನ್ಯಾಸ ಸುಮಾರು ೧ನೇ ಶತಮಾನದ ಪೂರ್ವದಿಂದಲೆ ವಾಸ್ತು ನಿರ್ಮಿತಿಯಲ್ಲಿ ಬಳಸಿರುವುದನ್ನು ೧-೨ ಶತಮಾನದ ಮಥುರಾದಲ್ಲಿಯ ಇಟ್ಟಗೆಯ ವಿಷ್ಣು ದೇವಾಲಯ, ನಾಗಾರ್ಜುನಕೊಂಡ (ಗುಂಟೂರ) ಬನವಾಸಿಯ ಉತ್ಖನನಗಳಲ್ಲಿ ತೋರಿಬಂದ ಇಟ್ಟಗೆ ದೇವಾಲಯ, ಬೌದ್ಧ ಚೈತ್ಯಾಲಯಗಳಲ್ಲಿ ಕಾಣುತ್ತವೆ. ಐಹೊಳೆಯ ಚಿಕ್ಕಿ, (ಶಿವ), ಅಂಬೆಗೇರ (ಸೂರ್ಯ), ಹುಚ್ಚಮಲ್ಲಿ ಮೊದಲಾದವು ಕ್ರಿ.ಶ. ೧-೫ ಶತಮಾನದ ಪ್ರಾಚೀನ ಚೈತ್ಯಾಲಯದ ವಿನ್ಯಾಸದಲ್ಲಿದೆ.

ಲಡಖಾನ ಮತ್ತು ಕೊಂತಿ ಗುಡಿಯು ಒಂದು ವಿಭಿನ್ನ ಪ್ರಕಾರದ ವಿನ್ಯಾಸದಲ್ಲಿವೆ ವಿಶಾಲವಾದ ಸಮಬಾಹು ಚೌಕೋನದ, ಇಲ್ಲವೆ ಆಯತಾಕಾರದ ಸಭಾಂಗಣದ ಒಳಗೆ ಹಿಂದಿನ ಗೋಡೆಗೆ ಸೇರಿದಂತೆ ಗರ್ಭಗೃಹ ಇರುತ್ತದೆ. ಮಧ್ಯಭಾಗದ ಛತ್ತನ್ನೂ ಮೇಲೆರಿಸಿ ಇದರ ಸುತ್ತಲೂ ಇಳಿಜಾರು ಮಾಡು ಇರುತ್ತದೆ. ಹೀಗಾಗಿ ಗರ್ಭಗುಡಿಗೆ ಪ್ರದಕ್ಷಿಣಾ ಪಥ ಇರುವುದಿಲ್ಲಾ. ಲಾಡಖಾನ ದೇವಾಲಯದ ಗೋಡೆಯ ಮೇಲಿನ ಶಾಸನಗಳ ಆಧಾರದ ಮೇಲೆ ಹಾಗೂ ಇದರ ವಿನ್ಯಾಸವನ್ನು ಗಮನಿಸಿದಾಗ ಇಂಥ ದೇವಾಲಯಗಳು ಇಂದಿನ ಕಲ್ಯಾಣ ಮಂಟಪಗಳಿದ್ದಂತೆ. ಆದ್ದರಿಂದ ಇವುಗಳನ್ನು ಮಂಡಪಗಳೆಂದು ಕರೆಯಲಾಗಿದೆ.

ಐಹೊಳೆಯಲ್ಲಿ ಗುಡಿಗಳಲ್ಲಿ ಮುಖವಿನ್ಯಾಸ ಶಿಖರ ವಿನ್ಯಾಸಗಳಲ್ಲೂ ವೈವಿಧ್ಯತೆ ಎದ್ದು ಕಾಣುತ್ತದೆ. ಫಾಂಸನ ಮಾದರಿ ಹೆಚ್ಚಾಗಿ ಓಡಿಸ್ಸಾ ಪ್ರದೇಶದಲ್ಲಿದೆ. ಐಹೊಳೆಯಲ್ಲಿ ಮಲ್ಲಿಕಾರ್ಜುನ, ಬಡಗೇರ, ಮಟ್ಟಿನ, ತ್ರ್ಯಂಬಕೇಶ್ವರ ಮೊದಲಾದವು ಫಾಂಸನ ಮಾದರಿಯಲ್ಲಿವೆ. ಈ ಮಾದರಿಯನ್ನು ''ಕದಂಬ ನಾಗರ'' ವೆಂದೂ ಹೇಳುವ ವಾಡಿಕೆ ಇದೆ. ಬೆಟ್ಟವನ್ನು ಕೊರೆದು ಸೃಷ್ಟಿಸಿದ ಒಂದು ಶೈವ, ಒಂದು ಜೈನ ಗುಹಾ ದೇವಾಲಯ

ಬಸದಿಗಳಿವೆ. ಉಳಿದೆಲ್ಲಾ ಪ್ರಾಚೀನ ದೇವಾಲಯಗಳು ಕೆತ್ತಿದ ಬಿಡಿ ಕಲ್ಲುಗಳಿಂದ ಕಟ್ಟಿದ ದೇವಾಲಯಗಳು, ಐಹೊಳೆಯಲ್ಲಿ ಬಾದಾಮಿ ಚಾಲುಕ್ಯರ ಕಾಲದವಲ್ಲದೇ, ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳು ಗಣನೀಯ ಸಂಖ್ಯೆಯಲ್ಲಿವೆ, ಹೀಗೆ ಒಂದೇ ಪ್ರದೇಶದಲ್ಲಿ ಭಾರತದ ವಿವಿಧ ಪ್ರಮುಖ ಮಾದರಿಗಳ ದೇವಾಲಯಗಳು ಒಂದೆಡೆಯಲ್ಲಿರುವದರಿಂದ, ಇದನ್ನೂ ''ದೇವಾಲಯ ವಾಸ್ತುಶಿಲ್ಪದ ಪ್ರಯೋಗಾಲಯ'' ಎಂದು ಉದ್ಗರಿಸಿರುತ್ತಾರೆ.

ಬೆಡಗಿನ ಬಸದಿಗಳ ಬಾದಾಮಿ

ಪ್ರಾಚೀನ ಕರ್ನಾಟಕದ ಬಲಿಷ್ಠ ಸಾಮ್ರಾಜ್ಯವಾದ ಚಾಲುಕ್ಯರ ರಾಜಧಾನಿಯಾದ ''ವಾತಾಪಿ'' (ಈಗಿನ ಬಿಜಾಪುರ ಜಿಲ್ಲೆಯಲ್ಲಿಯ ಒಂದು ತಾಲೂಕ - ಬಾದಾಮಿ) ಗದಗ - ಸೊಲ್ಲಾಪುರ ರೈಲು ದಾರಿಯಲ್ಲಿ ಬರುತ್ತಿದ್ದು, ವಿಜಾಪೂರದಿಂದ ದಕ್ಷಣಕ್ಕೆ ಸುಮಾರು ೧೫೦ ಕಿ.ಮಿ.ಗಳ ದೂರದಲ್ಲಿದೆ. ಬಾದಾಮಿ ರೈಲು ನಿಲ್ದಾಣದಿಂದ ಎರಡೂ ಬದಿಗೆ ವೃಕ್ಷಗಳಿಂದಾಚ್ಛಾದಿತವಾದ, ತಂಪಾದ, ರಾಜಮಾರ್ಗವೇನೋ ಎನ್ನುವಂತೆ ಕಾಣುವ ದಾರಿಯು ದಕ್ಷಿಣಕ್ಕೆ ಸುಮಾರು ೫ಕಿ.ಮಿ. ಹರಿದು, ಬಣ್ಣ ಬಣ್ಣದ ಬಂಡೆಗಲ್ಲುಗಳ ನಡುವೆ ನಿಂತಿರುವ ನಗರಕ್ಕೆ ದರ್ಶಕನನ್ನು ತಂದು ನಿಲ್ಲಿಸುತ್ತದೆ. ಇದೇ ಗತವೈಭವಗಳ ಹುದುಗಿಸಿಕೊಂಡಿರುವ ಚಾಲುಕ್ಯರ ರಾಜಧಾನಿ - ಬಾದಾಮಿ.

ಶಾಸನಗಳಲ್ಲಿ ಬಾದಾಮಿಯನ್ನು ''ವಿಜಯ ವಾತಾಪಿ ಅಧಿಷ್ಠಾನ, ವಾತಾಪಿಪುರ'' ಎಂದು ಕರೆಯಲಾಗಿದೆ. ಟಾಲೊಮಿಯ ಗ್ರಂಥದಲ್ಲಿ ''ಬಾಧಾಮಿಯೊ'' ಎಂದು ಹೆಸರಿಸಲ್ಪಾಗಿದೆ. ಈ ಹೆಸರಿಗೆ ಸಂಬಂಧಿಸಿದಂತೆ ಪುರಾಣ ಪ್ರಸಿದ್ಧ ಅಗಸ್ತ್ಯ ಮಹರ್ಷಿಯು ಈ ಪ್ರದೇಶದಲ್ಲಿದ್ದ ವಾತಾಪಿ ಮತ್ತು ಇಲ್ವಲನನ್ನು ನಿಗ್ರಹಿಸಿದ ಕಥೆಯನ್ನು ಹೇಳುತ್ತಾರೆ. ವಾತಾಪಿಯ ನಗರವೇ ಬಾದಾಮಿ, ಇಲ್ವಲನ ನಗರವು ಐಹೊಳೆಯಾಗಿತ್ತೆಂದು ನಂಬಿಕೆ.

ಅಗಸ್ತ್ಯತೀರ್ಥದ ಉತ್ತರಕ್ಕೆ ಹಬ್ಬಿರುವ ಗುಡ್ಡದ ಮೇಲೆ ಕೋಟೆಯ ಅವಶೇಷಗಳು ಕಾಣುತ್ತವೆ. ಈ ಕೋಟೆಯನ್ನು ಮೊದಲನೆಯ ಪುಲಿಕೇಶಿಯು ಕಟ್ಟಿಸಿದನೆಂದು ಇಲ್ಲಿಯ ಶಾಸನವು ಹೇಳುತ್ತದೆ. ಚಾಲುಕ್ಯ ಅರಸರ ಮೊಟ್ಟಮೊದಲ ವಾಸ್ತುಕೃತಿಯೇ ಇದು. ಮಂಗಳೇಶನ (ಕ್ರಿ.ಶ. ೫೭೮ರಲ್ಲಿ) ''ಮಹಾವಿಷ್ಣುಗೃಹ'' ನಿರ್ಮಾಣಕ್ಕೆ ಕಾರಣನಾದನು. ಇದೇ ಇಂದು ಮೂರನೆಯ ಗುಹಾಲಯವಾಗಿದೆ. ಇಮ್ಮಡಿಪುಲಿಕೇಶಿಯ ಆಸ್ಥಾನದ ಕವಿಯಾದ ರವಿಕೀರ್ತಿಯು ಐಹೊಳೆ ಗುಡ್ಡದ ಮೇಲೆ (ಕ್ರಿ.ಶ.೬೩೪)ರಲ್ಲಿ ಒಂದು 'ಜಿನೇಂದ್ರಾಲಯವನ್ನು' ಕಟ್ಟಿಸಿದನು. ಇದನ್ನೇ 'ಮೇಗುಡಿ' ಎಂದು ಕರೆಯುತ್ತಾರೆ. ''ಸತ್ಯಾಶ್ರಯ'' ಬಿರುದಾಂಕಿತ ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ ರಾಜ್ಯ ವಿಸ್ತಾರದೊಡನೆ, ವಾಸ್ತುಶಿಲ್ಪ ವಿಕಾಸಗೊಂಡಿತು. ಉತ್ಕೃಷ್ಟತೆಯ ಹಂತ ತಲುಪಿತು. ವಾಸ್ತುಶಿಲ್ಪ ಎಷ್ಟೊಂದು ಪ್ರಭಾವಯುತವಾಗಿತ್ತೆಂದರೆ ಪಲ್ಲವ ನರಸಿಂಹವರ್ಮ ಬಾದಾಮಿಯನ್ನು ಗೆದ್ದು ''ವಾತಾಪಿಕೊಂಡ'' ಬಿರುದು ಧರಿಸಿದ, ಚಾಲುಕ್ಯರ ರಾಜಧಾನಿಯಲ್ಲಿಯ ಅಪೂರ್ವ ಕಲಾಕೃತಿಗಳನ್ನು ನೋಡಿ ಸ್ಫೂರ್ತಿಗೊಂಡ. ಮಹಾಬಲಿಪುರಂ ದಲ್ಲಿದ್ದ ಬೃಹದಾಕಾರದ ಪ್ರತ್ಯೇಕ ಪ್ರತ್ಯೇಕ ಕಲ್ಲು ಗುಂಡಗಳನ್ನು ದೇವಾಲಯಗಳನ್ನಾಗಿ ಕೆತ್ತಿಸಿದನು. ಅವು ಪಂಚಪಾಂಡವರ ರಥಗಳೆಂದು ಜಗತ್ಪ್ರಸಿದ್ಧವಾಗಿವೆ.

ಪಲ್ಲವರಿಂದ ಮತ್ತೆ ರಾಜ್ಯಗೆದ್ದುಕೊಂಡ ಚಾಲುಕ್ಯರು ಮತ್ತೆ ವಾಸ್ತುಶಿಲ್ಪ ಮೆರೆಯುವಂತೆ ಮಾಡಿದರು. ಅಪರೂಪದ ದೇವಾಲಯಗಳನ್ನು ಕಟ್ಟಿಸಿದರು. ಸಾಮಾನ್ಯವಾಗಿ ಎಲ್ಲೆಡೆಗಳಲ್ಲಿ ಶಿವನಿಗೆ, ವಿಷ್ಣುವಿಗೆ, ಬ್ರಹ್ಮನಿಗೆ ಪ್ರತ್ಯೇಕ ಪ್ರತ್ಯೇಕ ದೇವಾಲಯಗಳಿವೆ. ಆದರೆ

ಈ ತ್ರಿಮೂರ್ತಿಗಳಿಗೆ ಒಂದೇ ದೇವಾಲಯ ವಿರುವುದು ತೀರ ಅಪರೂಪ. ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಕಟ್ಟಿಸಿದ ಇಂಥ ತ್ರೀಮೂರ್ತಿ ದೇವಾಲಯವೇ ಬಾದಾಮಿಯ ಈ ಅಪರೂಪ ದೇವಾಲಯ (ಕ್ರಿ.ಶ. ೬೯೯) ''ಸರ್ವಧರ್ಮ ಧೇನುನಿವಹಕ್ಕಾಡುಂಬೊಲಂ'' ಎಂದು ಚಾಲುಕ್ಯರ ನಾಡನ್ನು ವರ್ಣಿಸಿರುವುದು ಔಚಿತ್ಯಪೂರ್ಣ.

ಬಾದಾಮಿ ಚಾಲುಕ್ಯರ ಶಿಲ್ಪಕಲೆ ಜಗತ್ಪ್ರಸಿದ್ಧವಾಗಿದೆ. ಇಲ್ಲಿಯ ವಾಸ್ತುಶಿಲ್ಪರಚನೆ, ಪ್ರಕಾರಗಳು, ವೈವಿಧ್ಯ, ಮೂರ್ತಿಶಿಲ್ಪಗಳ ಚೆಲುವು, ಗಾಂಭೀರ್ಯ ಹಾಗೂ ಸಹಜತೆಯು ಭಾರತೀಯ ಶಿಲ್ಪಕಲೆಯ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಬಾದಾಮಿಯಲ್ಲಿ ರಚನೆಯ ದೃಷ್ಟಿಯಿಂದ ಎರಡು ಪ್ರಕಾರಗಳ ದೇವಾಲಯಗಳಿವೆ. ಬೆಟ್ಟವನ್ನು ಕೊರೆದು ಸೃಷ್ಟಿಸಿದ ಮತ್ತು ಚೆನ್ನಾಗಿ ಕೆತ್ತಿದ ಘನಾಕೃತಿಯ ಬಿಡಿಕಲ್ಲುಗಳಿಂದ ಕಟ್ಟಿದ ದೇವಾಲಯಗಳು. ಮೊದಲನೆಯ ಪ್ರಕಾರದಲ್ಲಿ ನಿರ್ಮಿಸಬೇಕೆಂದಿರುವ ಯಾವುದೇ ವಸ್ತುವಿನ ಒಳಭಾಗಗಳನ್ನು ಮತ್ತು ಅವುಗಳ ವಿವರಣೆಗಳನ್ನು ಮಾತ್ರ ಬಿಡಿಸಬಹುದು. ನೋಡಲು ತುಸು ಹೆಚ್ಚು ಕಡಿಮೆ ನೈಸರ್ಗಿಕ ಗುಹೆಯಂತಿರುತ್ತವೆ. ಬಾದಾಮಿಯಲ್ಲಿ ಸ್ಥಳೀಯವಾಗಿ 'ಮೇಣಬಸದಿ' ಗಳೆಂದು ಇವು ಹೆಸರುವಾಸಿಯಾಗಿವೆ. ಕರ್ನಾಟಕದಲ್ಲಿ ಬಾದಾಮಿಯನ್ನು ಬಿಟ್ಟರೆ ಬೇರೆ ಎಲ್ಲಿಯೂ ಈ ಮಟ್ಟದ ಪ್ರಾಚೀನ ಶಿಲ್ಪಕಲಾವೈಭವ ಸಿಕ್ಕುವದಿಲ್ಲ.

ಬಾದಾಮಿಯ ಬೆಟ್ಟದಲ್ಲಿ ನಾಲ್ಕು ಗುಹಾಮಂದಿರಗಳಿವೆ. ಅವುಗಳಲ್ಲಿ ಒಂದನೆಯದು ಶಿವಾಲಯ. ಎರಡು ಮತ್ತು ಮೂರು ಇವು ವೈಷ್ಣವಾಲಯಗಳು. ನಾಲ್ಕನೆಯದು ಜಿನಾಲಯ. ಎರಡನೆಯ ಮತ್ತು ಮೂರನೆಯ ಗವಿಗಳ ನಡುವೆ ಪೊಳ್ಳಿನಲ್ಲಿ ಒಂದು ಬೌದ್ಧವಿಗ್ರಹ ಕೆತ್ತಿದೆ. ಇದು ಸೂಕ್ಷ್ಮವಾಗಿ ಗುರುತಿಸಲಾರದಷ್ಟು ಅಳಿಸಿ ಹೋಗಿದೆ. ಇದು ಬೋಧಿಸತ್ತ್ವ ಪದ್ಮಪಾಣಿ ಆಗಿರಬಹುದು. ನಾಲ್ಕನೆಯ ಗವಿಯ ಗುಡ್ಡದಲ್ಲಿ ಪೂರ್ಣವಾಗದ ಒಂದು ಗವಿಯಿದೆ. ಅದರಲ್ಲಿಯೂ ಇದೇ ಬಗೆಯ ಬೌದ್ಧ ಆಕೃತಿಯಿದೆ. ಇದಾದರೂ ಬೋಧಿಸತ್ತ್ವ ಪದ್ಮಪಾಣಿಯೆಂದು ಊಹಿಸಲಾಗಿದೆ. ಇಂಥ ಕುರುಹುಗಳನ್ನು ನೋಡಿದರೆ ಬಾದಾಮಿಯ ಪ್ರದೇಶವಾರೂ ಬೌದ್ಧಕಲಾವಿದರ ಸಂಪರ್ಕದಿಂದ ದೂರವಿರಲಿಲ್ಲವೆಂದು ತಿಳಿಯಬೇಕಾಗುತ್ತದೆ.

ಮೂರನೆಯ ಗವಿಯಲ್ಲಿ ಒಂದನೆಯ ಪುಲಕೇಶಿಯ ಮಗ ಮಂಗಳೇಶನ ಶಾಸನವಿದೆ. ಇದರ ಕಾಲ ಕ್ರಿ.ಶ.೫೭೮. ಈ ಆಧಾರ ಅಮೂಲ್ಯವಾದುದು. ಇದು ಈ ಗವಿಗಳ ನಿರ್ಮಾಣದ ಕುರಿತು ನಿಶ್ಚಿತ ಕಾಲಪರಿಮಿತಿಯನ್ನು ಒದಗಿಸುತ್ತದೆ ಮಾತ್ರವಲ್ಲದೆ, ಇಂಥ ಬೇರೆ ಆಲಯಗಳ ಕಾಲಮಾಪನಕ್ಕೆ ಒಂದು ಸುಲಭ ಅಳತೆಗೋಲನ್ನು ಕೊಡುತ್ತದೆ. ಈ ಗವಿಗಳಲ್ಲಿ ಎಲ್ಲಕ್ಕೂ ಪ್ರಾಚೀನಗವಿ ಮೂರನೆಯದು, ಅನಂತರ ಸ್ವಲ್ಪಕಾಲಾಂತರದಲ್ಲಿ ಎರಡನೆಯ ಮತ್ತು ಒಂದನೆಯ ಗವಿಗಳನ್ನು ಕೊರೆಯಿಸಿರಬೇಕು. ಮುಂದೆ ಸುಮಾರು ಒಂದು ಶತಮಾನವಾಗಲು ನಾಲ್ಕನೆಯ ಜೈನಗವಿಯನ್ನು ರಚಿಸಿದಂತೆ ತೋರುತ್ತದೆ.

ಈ ಆಲಯಗಳಗೆ ಕೆಲವು ಸಾಮಾನ್ಯ ಲಕ್ಷಣಗಳಿವೆ. ಅವು ಹೀಗೆಃ ಮುಂದುಗಡೆ ಕಂಬದ

ಪಡಸಾಲೆ; ಮಧ್ಯದಲ್ಲಿ ಸ್ತಂಭಗಳಿಂದ ಶೋಭಾಯಮಾನವಾದ ದೊಡ್ಡ ಮಂಟಪ; ಹಿಂಬದಿಗೆ ಚಿಕ್ಕವಾದ ಚತುರಸ್ರಗರ್ಭಗೃಹ. ಮಧ್ಯರಂಗದ ಕೆತ್ತನೆಯಲ್ಲಿ ಶಿಲ್ಪಿಗಳು ತಮ್ಮ ಕಲಾಚಾತುರಿಯನ್ನು ವಿಶೇಷವಾಗಿ ಪ್ರದರ್ಶಿಸಿರುವರು. ಈ ಗವಿಗಳಲ್ಲಿ ಚಿತ್ರಿತವಾಗಿರುವ ಶಿಲ್ಪಸೌಭಾಗ್ಯವನ್ನೆಲ್ಲ ವರ್ಣಿಸುವ ಅವಕಾಶ ಇದಲ್ಲ. ಸಂಕ್ಷೇಪವಾಗಿ ಕೆಲವೊಂದು ವಿಶೇಷಾಂಶಗಳನ್ನು ಮಾತ್ರ ಇಲ್ಲಿ ನಿರ್ದೇಶಿಸಬಹುದು.

ಒಂದನೆಯ ಗವಿಯಲ್ಲಿ ತ್ರಿಶೂಲಧಾರಿ ದ್ವಾರಪಾಲಕ, ಮಹಿಷಾಸುರ ಮರ್ದಿನಿ, ತಾಂಡವಮೂರ್ತಿನಟರಾಜ, ಕಾರ್ತಿಕೇಯ, ಹರಿಹರ, ಅರ್ಧನಾರೀಶ್ವರ, ಅನಂತಾಸನ ನಾರಾಯಣ, ಕೈಲಾಸದಲ್ಲಿ ಶಂಕರ, ವೈಕುಂಠದಲ್ಲಿ ವಿಷ್ಣು, ಗಿರಜಾ ಕಲ್ಯಾಣ ಈ ದೃಶ್ಯಗಳು ಪ್ರೇಕ್ಷಣೀಯವಾಗಿವೆ. ಇವಲ್ಲದೆ ಅಲ್ಲಲ್ಲಿ ತೋರಿಸಿದ ಕುಬ್ಜಾಕೃತಿಗಣಗಳು, ಗಗನಚಾರಿ ಗಂಧರ್ವರು, ಋಷಿಗಳು, ತಪಸ್ವಿಗಳು ಮುಂತಾದ ಪೂರಕ ವ್ಯಕ್ತಿಗಳ ವೈಖರಿಯನ್ನು ಅವಲೋಕಿಸಬಹುದು. ಇಂಥ ಪೂರಕ ಚಿತ್ರಗಳನ್ನು ಪಕ್ಕದ ಗವಿಗಳಲ್ಲಿಯೂ ಆಣಬಹುದು.

ಇಲ್ಲಿ ಲಕ್ಷಿಸತಕ್ಕಂತಹ ಒಂದೆರಡು ಅಂಶಗಳಿವೆ. ನಟರಾಜನಿಗೆ ಸಾಮಾನ್ಯವಾಗಿ ಹತ್ತು ಕೈಗಳನ್ನು ತೋರಿಸುತ್ತಾರೆ. ಆದರೆ ಇಲ್ಲಿರುವ ಕೈಗಳು ಹದಿನೆಂಟು. ಇಂತಹ ವಿಗ್ರಹ ದಕ್ಷಿಣ ಭಾರತದಲ್ಲಿ ಸಿಕ್ಕುವದು ವಿರಲ.' ಶಿವ-ಪಾರ್ವತೀ ಪರಿಣಯದ ಸನ್ನಿವೇಶ ವರಾಹ ಪುರಾಣದಲ್ಲಿಯ ಕಥೆಯನ್ನು ಅನುಸರಿಸುತ್ತದೆ. ಅದು ಹೀಗೆಃ ತನ್ನನ್ನು ವರಿಸಲು ತಪವನ್ನು ಆಚರಿಸುತ್ತಿದ್ದ ಗಿರಿಜೆಯ ಬಳಿಗೆ ಜರ್ಜರ ವೃದ್ಧಬ್ರಾಹ್ಮಣ ವೇಷಧರಿಸಿ ಬಂದ ಶಿವನು ಊಟ ಬೇಡುವನು. ಸ್ನಾನ ಮಾಡಿ ಬರಲು ಹೇಳಿದ ಆಕೆಯ ಸೂಚನೆಯಂತೆ ಆತ ಪಕ್ಕದ ಹೊಳೆಗೆ ಹೋಗುವನು. ಅಲ್ಲಿ ಮೊಸಳೆಯ ಬಾಯಿಗೆ ತುತ್ತಾಗುವನು. ಆತನ ಆರ್ತನಾದ ಕೇಳಿ ಗಿರಿಜೆ ಸಹಾಯಕ್ಕೆ ಧಾವಿಸುವಳು. ಆದರೆ ಶಿವನ ವಿನಾ ಬೇರೆ ಯಾರಿಗೂ ಕೈನೀಡೆನೆಂಬ ತನ್ನ ಪ್ರತಿಜ್ಞೆ ನೆನಪಾಗಿ ಆಕೆ ಒಂದು ಕ್ಷಣ ಹಿಂದೆಗೆಯುವಳು. ಕೊನೆಗೆ ತನ್ನ ಪ್ರತಿಜ್ಞೆಯನ್ನು ಬದಿಗಿರಿಸಿ ಆ ವೃದ್ಧನ ಪ್ರಾಣ ಉಳಿಸಲು ಆತನಿಗೆ ಕೈಕೊಡುವಳು. ಈ ಸತ್ವ ಪರೀಕ್ಷೆಯಿಂದ ಶಿವನು ಪ್ರಸನ್ನನಾಗಿ ತನ್ನ ನಿಜಸ್ವರೂಪವನ್ನು ಪ್ರಕಟಿಸುವನು. ಗಿರಿಜೆಯ ತಪವೂ ಪ್ರತಿಜ್ಞೆಯೂ ಸಾರ್ಥಕವಾಗುವವು.

ಎರಡನೆಯ ಗವಿ ವೈಷ್ಣವಾಲಯವಾಗಿದೆ. ಇದರಲ್ಲಿ ವಿಷ್ಣುವಿಗೆ ಪ್ರಧಾನ ಪಾತ್ರವಿದ್ದು, ಸಮುದ್ರಮಥನದ ವೃತ್ತಾಂತ ಮತ್ತು ಕೃಷ್ಣ ಚರಿತ್ರೆಯಲ್ಲಿನ ಕಥೆಗಳನ್ನು ವಿವರವಾಗಿ ಚಿತ್ರಿಸಿದೆ. ಮುಂಭಾಗದಲ್ಲಿ ವರಾಹ ಮತ್ತು ವಾಮನಾವತಾರದ ಭವ್ಯದೃಶ್ಯಗಳು ಪ್ರೇಕ್ಷಕರ ದೃಷ್ಟಿಯನ್ನು ಸೆಳೆದುಕೊಳ್ಳುತ್ತವೆ. ಇಂದ್ರ, ವರುಣಾದಿ ದಿಶಾಪಾಲರು ಮತ್ತು ಮಹಿಷಾಸುರನನ್ನು ಸಂಹರಿಸಿದ ದುರ್ಗೆ, ಇವರನ್ನು ಅಲ್ಲಲ್ಲಿ ನೋಡಬಹುದು. ಕಂಬಗಳ ಮೇಲೆ ಮತ್ತು ಚಾವಣಿಯಲ್ಲಿ ಸರಸ್ವತಿ, ಕಾಮ-ರತಿ, ಶ್ರೀದೇವಿ, ವಿಷ್ಣುಚಕ್ರ, ನಂದ್ಯಾವರ್ತಲಾಂಛನ, ಮುಂತಾದ ಪ್ರತೀಕ ಆಕೃತಿಗಳನ್ನು ರೂಪಿಸಿರುವರು.

ವಾಮನಾವತಾರದ ದೃಶ್ಯ ಮೂರನೆಯ ಗವಿಯಲ್ಲಿ ಮತ್ತೆ ಕಾಣಸಿಕೊಳ್ಳುತ್ತದೆ. ಈ ಎರಡೂ ಚಿತ್ರವೃಂದದಲ್ಲಿ ಶುಕ್ರಾಚಾರ್ಯನ ಅಥವಾ ಬಲಿಯ ವಿಗ್ರಹ ಗೌತುಮ ಬದ್ಧನ ವೇಷದಂತೆ ಚಿತ್ರಿಸಲಾಗಿದೆ. ಬೌದ್ಧಶಿಲ್ಪದ ಸೂಕ್ಷ್ಮ ಪ್ರಭಾವದ ದ್ಯೋತಕವಿದು.

ಇನ್ನು ಮೂರನೆಯ ಗುಹೆ, ಇದಾದರೂ ವಿಷ್ಣುಮಂದಿರವಾಗಿದೆ. ವಿಸ್ಮಿತ ಮತ್ತು ಕಲಾಪೂರ್ಣ ಚಿತ್ರ ಸೃಷ್ಟಿಯ ಮೂಲಕ ಇದು ಬಾದಾಮಿಯ ಗುಡಿಗಳಲ್ಲಿ ಅಗ್ರಸ್ಥಾನವನ್ನು ಅಲಂಕರಿಸುತ್ತದೆ. ಪ್ರವೇಶ ದ್ವಾರದ ಮೇಲೆ ಗಂಧರ್ವ ಯುಗ್ಮಗಳ ಮಧ್ಯದಲ್ಲಿ ಭವ್ಯಾಕೃತಿ ಗರುಡನು ಆಕರ್ಷಕನಾಗಿದ್ದಾನೆ. ಗೋಡೆಗಳು, ಕಂಬಗಳು, ದ್ವಾರ ಪಟ್ಟಿಕೆಗಳು, ಮುಂತಾದ ಸ್ಥಳಗಳೆಲ್ಲ ನಯವಾದ ಕೆತ್ತನೆಯ ಕೆಲಸದಿಂದ ಶೋಭೆಯನ್ನು ತಳೆದಿವೆ. ಇಲ್ಲಿ ನಾಗ ನಾಗನಿಯರು, ಶಿವ-ಪಾರ್ವತಿಯರು, ಅರ್ಧನಾರೀಶ್ವರ, ಕಾಮದೇವ, ಕಾರ್ತಿಕೇಯ, ವರುಣ ಮೊದಲಾದ ದೇವತಾ ವಿಗ್ರಹಗಳೂ, ಮರ್ತ್ಯಲೋಕದ ನರನಾರಿಯರ ಶೃಂಗಾರಿಕ ದೃಶ್ಯಗಳೂ ಮನೋಹರವಾಗಿವೆ. ಸಮುದ್ರ ಮಥನದ ವೃತ್ತಾಂತ, ಇಂದ್ರಲೋಕದಿಂದ ಅಮೃತ ತಂದ ಗರುಡನ ಕಥೆ, ಕೃಷ್ಣಚರಿತ್ರೆಯಲ್ಲಿನ ಘಟನೆಗಳು, ಪಾರಿಜಾತಾಪಹಾರದ ಮತ್ತು ಸುಭದ್ರಾಹರಣದ ಆಖ್ಯಾನಗಳು ಇಲ್ಲಿ ಚಿತ್ರಿತವಾಗಿವೆ. ಬೃಹದಾಕಾರದ ವಿಗ್ರಹಗಳಲ್ಲಿ ವಿರಾಟ ಪುರುಷ, ವಾಮನ, ವರಾಹ, ಇವು ವೈವಿಧ್ಯಪೂರ್ಣವಾಗಿವೆ. ಅನಂತ(ನಾಗ)ನ ಮೇಲೆ ಕುಳಿತಂಥ ವಿಷ್ಣುವಿನ ವಿಗ್ರಹವಿದೆ. ಇದು ಅಪೂರ್ವವೆನ್ನುವಂತಿದೆ. ಈ ಗುಹಾಲಯದಲ್ಲಿ ಸೊಗಸಾದ ವರ್ಣಚಿತ್ರಗಳಿವೆ. ಮುಂಭಾಗದ ಮಾಡಿನ ಒಳಬದಿಯಲ್ಲಿರುವ ಗರುಡಮೂರ್ತಿಯ ಬಲಬದಿಗೆ ಮೂರು ಚಿತ್ರಫಲಕಗಳಿವೆ. ಮೊದಲು ಕಲ್ಲಿನ ಮೇಲೆ ಸುಣ್ಣದ ಗಾರೆಯನ್ನು ಬಳಿದು, ಸಮತಲ ಮಾಡಿ ಅದರ ಮೇಲೆ ಹಸಿರು, ಕಂದು, ಕೆಂಪು, ಮೊದಲಾದ ಖನಿಜ ಬಣ್ಣಗಳಿಂದ ಚಿತ್ರಗಳನ್ನು ಬಿಡಿಸಲಾಗಿದೆ.

ಕಟ್ಟಿಸಿದ ದೇವಾಲಯ ವಿನ್ಯಾಸಗಳಲ್ಲೂ ವೈವಿಧ್ಯತೆ ಇದೆ. ಕೆಲವೊಂದು ದೇವಾಲಯಗಳಿಗೆ ಪ್ರದಕ್ಷಣಾ ಪಥ ಇದ್ದರೆ, ಕೆಲವುಗಳಿಗೆ ಇರುವುದಿಲ್ಲ. ಗುಡಿಯ ಶಿಖರಗಳಲ್ಲೂ ವೈವಿಧ್ಯತೆ ಇದೆ. ೧೧ನೇ ಶತಮಾನದ ಕೊನೆಯಲ್ಲಿ ರೇಖಾನಾಗರ ಮತ್ತು ವಿಮಾನ ಮಾದರಿಗಳ ಸಮತೋಲ ಸಂಯೋಜನೆಯಿಂದ ಒಂದು ಹೊಸ ಮಿಶ್ರ ಮಾದರಿಯ ಹುಟ್ಟಿಗೆ ಕಾರಣವಾಯಿತು. ಇದೇ 'ವೇಸರ್' ಮಾದರಿ. ಇದನ್ನೂ 'ಚಾಲುಕ್ಯ' ಮಾದರಿ ಎಂದು ಹೇಳುವುದುಂಟು. ಬಾದಾಮಿಯ ಎಲ್ಲಮ್ಮ (ವಿಷ್ಣು) ದೇವಾಲಯ ಇದಕ್ಕೆ ಒಂದು ಉತ್ತಮ ಉದಾಹರಣೆ.

ಬಾದಾಮಿ ಚಾಲುಕ್ಯರ ಕಾಲದಿಂದ ಸಾಂಸ್ಕೃತಿಕ ಚಟುವಟಿಕೆಗಳ ದಿವ್ಯವು ಭವ್ಯವು ಅಲ್ಲದೆ, ಕೆಲವು ಮೂಲಭೂತ ಮೌಲ್ಯಗಳ ಪಾಲನೆಯ ಆದರ್ಶಪ್ರಾಯವು, ಸ್ಫೂರ್ತಿದಾಯಕವು ಆಗಿವೆ. ಮಂಗಳೇಶನ ಭ್ರಾತೃ ಭಕ್ತಿ, ಇಮ್ಮಡಿ ಪುಲಕೇಶಿಯ ಶೌರ್ಯ,

ಇಮ್ಮಡಿ ವಿಕ್ರಮಾದಿತ್ಯನ ಉದಾತ್ತ ನಡತೆ, ವೀರಭಟನ ಕ್ಷಾತ್ರ ತೇಜಸ್ಸು, ನಟನೇವ್ಯ ಅಚಲನ ಆತ್ಮವಿಶ್ವಾಸ, ವಿನಾಪೋಟಯ ಆತ್ಮೀಯತೆ ನಮ್ಮಲ್ಲಿ ಸ್ವಲ್ಪ ಹೊತ್ತಾದರೂ ಅವರ ಬಗ್ಗೆ ಗೌರವ, ಅಭಿಮಾನ ತುಂಬುತ್ತವೆ. ನಮ್ಮನ್ನು ವಿಚಾರಪರರನ್ನಾಗಿ ಮಾಡುತ್ತವೆ. ಇಂಥ ಮೌಲ್ಯಗಳ ಸಾಧನೆಗೆ ಪ್ರೇರಪಿಸುತ್ತವೆ.

ಇಮ್ಮಡಿ ಪುಲಕೇಶಿಯ ಕಾಲದಲ್ಲಿ ಬಾದಾಮಿಗೆ ಭೆಟ್ಟಿಕೊಟ್ಟದ್ದ ಚೀನೀ ಯಾತ್ರಿಕ ಹ್ಯೂ.ಎನ್.ತ್ಸಾಂಗ್ ಕೂಡ ಉತ್ತಮ ಆರ್ಥಿಕತೆ ಹಾಗೂ ಸೈನ್ಯ ಬಲ ಹೊಂದಿದ್ದ ಚಾಲುಕ್ಯರ ಸ್ನೇಹಗುಣ ಮತ್ತು ಭಾವುಕತೆಯ ಉಜ್ವಲ ವಿವರಣೆಯನ್ನು ನೀಡಿದ್ದಾರೆ. ಚಾಲುಕ್ಯರ ನಾಟ್ಯಕಲೆ, ಸಾಹಿತ್ಯ, ಭಾಷಾ ಬೆಳವಣಿಗೆಗು ವಾಸ್ತುಶಿಲ್ಪದಷ್ಟೇ ಪ್ರಾಮುಖ್ಯತೆ ನೀಡಿದ್ದರು ಎಂಬುದು ಅಲ್ಲಿಯ ಶಾಸನಗಳಿಂದ ಊಹಿಸಲು ಸಾಧ್ಯ. ಹೀಗೆ ಒಂದು ಜನಾಂಗದ, ನಾಡಿನ ಸರ್ವತೋಮುಖ ಶ್ರೇಯಸ್ಸಿಗೆ ಅವಶ್ಯವಿದ್ದ ಎಲ್ಲ ಆಯಾಮಗಳ ಅಭಿವೃದ್ಧಿಗೆ ಅವರು ಶ್ರಮಿಸಿದ್ದರು.

ದಕ್ಷಿಣ ಕಾಶಿ - ಮಹಾಕೂಟ

ಭಕ್ತಾಜಿಷ್ಟ ಪ್ರವಂದೇವಂ। ಸುರುಸುರಾದಿಪೂಜಿತಂ।

ಮಹಾಕೂಟೇಶ್ವರಂ ಸಾಂಬಂ ಮಹಾದೇವರ ಭಜಾಮ್ಯಹಂ।।

ಯುಗ ಯುಗಗಳ ಒಡಲನ್ನು ಒಡೆದು ನೋಡಿದಾಗ, ನಾಸ್ತಿಕರನ್ನು ಆಸ್ತಿಕರನ್ನಾಗಿಸುವ ಆತ್ಮಜ್ಞಾನ ನೌಕೆಗೆ ಕೇಲ ಕಂಬದಂತಿರುವ ಈ ಪುಣ್ಯಕ್ಷೇತ್ರ, ಶಿವನ ಲೀಲೆಗೆ ಲಾಲಿಹಾಡಿ ದಕ್ಷಿಣ ಕಾಶಿಯೆಂದು ಪ್ರಸಿದ್ಧವಾಗಿವೆ. ಇಲ್ಲಿ ಋಷಿ-ಮಹರ್ಷಿಗಳೂ ಜಗದಾಚಾರ್ಯರೂ, ಸಿದ್ಧರು, ಸಂತರು ವಾಸಮಾಡಿ ಪರಶಿವ ಸನ್ನಿಧಿಯಲ್ಲಿ ತಪೋನುಷ್ಠಾನಗಳಿಂದ ಮಂತ್ರಸಿದ್ಧಿಯನ್ನು ಪಡೆದು ಲೋಕೋದ್ಧಾರವನ್ನು ಮಾಡಿರುವರು. ದುಷ್ಟರ ಸಂಹಾರ, ಶಿಷ್ಟರ ರಕ್ಷಣೆ ಗೈದಿರುವರು. ವಾತಾಪಿ, ಇಲ್ವಲರೆಂಬ ದೈತ್ಯ ಸೋದರರನ್ನು ಅಗಸ್ತ್ಯ ಋಷಿಯು ನಾಶಪಡಿಸಿ, ಕೋಟಿ ಲಿಂಗಗಳನ್ನು ಸ್ಥಾಪಿಸಿದರು ಎಂಬ ಪ್ರತೀತಿ ಇದೆ. ಈ ಕೋಟಿ ಲಿಂಗಗಳ ಕೂಟವೆ 'ಮಹಾಕೂಟ' ವಾಯಿತು. ಮಾಗಡ, ಮಾಗಡಪುರವೆಂತಲೂ ಇದನ್ನು ಕರೆಯುವರು. ಮಹಾಕೂಟ ಕ್ಷೇತ್ರದ ಮಹಿಮೆಯನ್ನು ಶಿವ ಮಹಾ ಪುರಾಣ ಹೀಗೆ ವರ್ಣಿಸಿದೆ:

''ಪಂಚಕ್ರೋಶಂ ಚತುರ್ದಿಕ್ಷು। ಕ್ಷೇತ್ರಮೇತತ್ ಪ್ರಕೀರ್ತಿತಂ...

ಕರ್ಮಾಣಾಂ ಕರ್ಷಣಾಚ್ಚೈವಕಾಶೀತಿ ಪರಿಪಠ್ಯತೆ।।''

ಕರ್ಮಗಳನ್ನು ಕೃಶಮಾಡುವುದರಿಂದ ಕಾಶಿಯೆಂಬ ಅನ್ವರ್ಥನಾಮ ಈ ಕ್ಷೇತ್ರಕ್ಕಿರುವುದು ಮೂರು ಬೆಟ್ಟಗಳ ಮಡಿಲಲ್ಲಿ, ಹಚ್ಚಹಸುರಿನ ನಡುವೆ ಇರುವ ಪ್ರಾಚೀನ ಪ್ರೇಕ್ಷಣೀಯ ಪುಣ್ಯಕ್ಷೇತ್ರ ಕಲೆಯ ಬೀಡು - ಮಹಾಕೂಟ ಕಲಾರಸಿಕರನ್ನೂ, ಯಾತ್ರಿಕರನ್ನು, ಭಕ್ತರನ್ನು ಬರಮಾಡಿಕೊಳ್ಳುತ್ತವೆ. ಶೈವ ಸಂಸ್ಕೃತಿಯ ಕುರುಹಾಗಿದೆ.

ಈ ಕ್ಷೇತ್ರದ ನಾಲ್ಕು ಕಡೆ ನಾಲ್ಕು ಬಾಗಿಲುಗಳಿರುವವು. ಪೂರ್ವದಿಕ್ಕಿನ ಬಾಗಿಲಲ್ಲಿ ರಾಮೇಶ್ವರ ಲಿಂಗವು, ಪಶ್ಚಿಮ ದ್ವಾರದಲ್ಲಿ ಮಲ್ಲಿಕಾರ್ಜುನ ಲಿಂಗವು, ಉತ್ತರ ದ್ವಾರದಲ್ಲಿ ಪಿನಾಕಿನಾಥ ಲಿಂಗವು, ದಕ್ಷಿಣ ಬಾಗಿಲಲ್ಲಿ ಕಪಿಲೇಶ್ವರ ವೆಂಬ ಶಿವಲಿಂಗವು ಪ್ರಸಿದ್ಧವಾಗಿರುವವು. ಮಹಾಕೂಟೇಶ್ವರ ದೇವಾಲಯದ ಹೊರ ಭಾಗದ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ದಿಕ್ಕುಗಳಲ್ಲಿ ಕ್ರಮವಾಗಿ ಭೈರವೇಶ್ವರ, ಮಹಾಗುಂಡೇಶ್ವರ, ಪರ್ವತೇಶ್ವರ, ಬ್ರಹ್ಮೇಶವರೆಂಬ ಚತುರ್ಮೂರ್ತಿಗಳು ಕ್ಷೇತ್ರದ ದಿಕ್ಪಾಲಕರಾಗಿರುವರು.

ಐತಿಹಾಸಿಕ ಹಿನ್ನೆಲೆ:

ಮಹಾಕೂಟೇಶ್ವರ ದೇವಾಲಯಗಳ ಸಂಕೀರ್ಣದ ನಿರ್ಮಾಣವನ್ನು ಚಾಲುಕ್ಯ, ಜಯಸಿಂಹನ ಮಗ ರಣರಾಗ ಕ್ರಿ.ಶ. ೫೫೦ರಲ್ಲಿ ಮಾಡಿದನು. ಬಾದಾಮಿ ಚಾಲುಕ್ಯರು ಶೈವ ಮತಕ್ಕೆ ಆಶ್ರಯದಾತರಾಗಿದ್ದರೆಂಬುದಕ್ಕೆ ಬಾದಾಮಿ, ಮಹಾಕೂಟ, ಪಟ್ಟದಕಲ್ಲು,

ಐಹೊಳೆಗಳಲ್ಲಿ ನಿರ್ಮಿಸಿದ ಶಿವಾಲಯಗಳು ಸಾಕ್ಷಿಯಾಗಿವೆ. ನಂತರ ಮಂಗಳೇಶನು ಕಾಚುರಿ ಕಲಚುರಿ ವಂಶದ ಬುದ್ಧವರ್ಮನನ್ನು ಯುದ್ಧದಲ್ಲಿ ಸೋಲಿಸಿ ವಶಪಡಿಸಿಕೊಂಡ ಸಮಸ್ತ ಸಂಪತ್ತನ್ನು ಆರಾಧ್ಯದೇವರ ಪೂಜೆ ವೈಭವ ಪೂರ್ಣವಾಗಿ ನಿರಂತರವಾಗಿ ನಡೆಯುವದಕ್ಕೆ ವಿನಿಯೋಗಿಸಿದನು. ಅಲ್ಲದೆ ಈ ವಿಜಯದ ಗುರುತಿಗಾಗಿ ಮಹಾಕೂಟ ದೇವಾಲಯದ ಎದುರಿಗೆ ಕ್ರಿ.ಶ. ೬೦೨ ಎಪ್ರಿಲ್ ೧೨ರಂದು ಧರ್ಮಸ್ಥಂಭ ನಿಲ್ಲಿಸಿದನೆಂದು ಶಾಸನದಿಂದ ಸ್ಪಷ್ಟವಾಗುವುದು. ಸಿದ್ದಾರ್ಥಿ ಸಂವತ್ಸರ ವೈಶಾಖ ಪೂರ್ಣಿಮೆಯೆಂದು ಧರ್ಮಸ್ಥಂಭ ನಿಲ್ಲಿಸಿದ್ದರಿಂದ ಇಂದಿಗೂ ವೈಶಾಖ ಪೂರ್ಣಿಮೆ (ಅಗಿಹುಣ್ಣಿವೆ)ಯ ದಿನ ಪ್ರತಿ ವರ್ಷ ರಥೋತ್ಸವ ಜರುಗುವುದು. ಸಧ್ಯ ಮಂಗಳೇಶನ ಈ ಧರ್ಮಸ್ಥಂಭವು ವಿಜಾಪುರದ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ. ಈ ದೇವಾಲಯಕ್ಕೆ ರಾಣಿ ದುರ್ಲಭದೇವಿ ಹತ್ತು ಗ್ರಾಮಗಳನ್ನು ದತ್ತಿ ಬಿಟ್ಟಳೆಂದು ಶಾಸನದಿಂದ ತಿಳಿಯುತ್ತದೆ. ವಿಜಯಾದಿತ್ಯನ ಆಸ್ಥಾನದಲ್ಲಿಯ ರಾಜನರ್ತಕಿ ವಿನಾಪೋಟಿ ಮಹಾಕೂಟೇಶ್ವರನಿಗೆ ಬಂಗಾರದ ಪೀಠವನ್ನು, ಬೆಳ್ಳಿಯ ಛತ್ರಿಯನ್ನೂ, ಅಷ್ಟಶತಕ್ಷೇತ್ರ ದಾನವನ್ನು ಸಮರ್ಪಿಸಿದ ಉಲ್ಲೇಖ ಮಹಾಕೂಟೇಶ್ವರ ಮಂದಿರದ ಮುಖಮಂಟಪದಲ್ಲಿಯ, ಬಲಕಂಬದಲ್ಲಿಯ ಶಾಸನವೊಂದರಲ್ಲಿದೆ. ಈ ಶಾಸನವು ಅಂದಿನ ವೇಶ್ಯೆಯರ ಧರ್ಮಬುದ್ಧಿ, ಮತ್ತು ದಾನಗುಣವನ್ನು ಎತ್ತಿ ತೋರಿಸುತ್ತದೆ.

ವಾಸ್ತುಶಿಲ್ಪ ವೈಭವ:

ಮಹಾಕೂಟೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದೆ. ಶಿವನ ಸಾಕಾರ ಮೂರ್ತಿಯಂತಿರುವ ಪರಿವಾರ ದೇವತೆಗಳನ್ನು ಎಡಬಲಕ್ಕೆ ಕೆತ್ತಲಾಗಿದ್ದು ಬಲ್ಲೆ, ಸರ್ಪ, ಜಟಾಮಂಡಲ, ಮಕರ ಮಂಡಲ ಪತ್ರ ಮಂಡಲ, ಕಟಿಸೂತ್ರ, ಕಂಠಿ, ತ್ರಿಶೂಲ, ನಾಗವಲಯಗಳಿಂದ ಅಲಂಕೃತವಾಗಿದ್ದು ಅಂದವಾಗಿವೆ. ದೇವಾಲಯದ ಎದುರಿಗೆ ನಂದಿಮಂಟಪವಿದೆ. ಅದರ ಹಿಂದೆ ೬ನೇ ಶತಮಾನದ ಗಣಪತಿ ವಿಗ್ರಹವಿದೆ. ಭಕ್ತರು ಎರೆದ ಎಣ್ಣೆಯಿಂದಾಗಿ ಜಿಡ್ಡುಗಟ್ಟಿ ಕಪ್ಪಾಗಿದೆ. ನಂದಿ ಮಂಟಪದ ಕಂಬ ಕಂಬಗಳಲ್ಲಿ ಕಾಮಲೀಲೆಯಲ್ಲಿ ತಲ್ಲೀನರಾದ ಸ್ತ್ರೀಪುರುಷರ ಕೆತ್ತನೆಗಳಿವೆ. ಇವು ವೈವಿಧ್ಯಮಯವಾದ ಆಸನಗಳಲ್ಲಿವೆ. ಲೌಕಿಕ ವ್ಯವಹಾರದಿಂದ ವಿಷಯ ಸುಖವನ್ನು ದಾಟಿದಾಗ ಮಹಾಕೂಟೇಶ್ವರನಲ್ಲಿ ಸಾಮುಜ್ಯಪದ ಸಿಗುವುದೆಂದು ಊಹಿಸಿ ಶಿಲ್ಪಿ ಈ ಚಿತ್ರಗಳನ್ನು ಬಿಡಿಸಿದಂತಿದೆ.

ಮಹಾಕೂಟೇಶ್ವರ ದೇವಾಲಯವು ದ್ರಾವಿಡ ವಿಮಾನ ಶೈಲಿಯಲ್ಲಿದೆ. ಅಗ್ರಮಂಟಪ, ಸಭಾಮಂಟಪ, ಗರ್ಭಗೃಹಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಲಿಂಗ ಪ್ರತಿಷ್ಠಾಪನೆ ಮಾಡಿದ್ದಾರೆ. ಪ್ರದಕ್ಷಿಣಾ ಪಥದಲ್ಲಿ ಜಾಲಂದ್ರಗಳಿಂದ ಬೆಳಕನ್ನು ಕಾಣಬಹುದು. ಮಹಾಕೂಟದ ಪ್ರಮುಖ ಶಾಸನಗಳೆಲ್ಲಾ ಈ ಗುಡಿಯ ಕಂಬಗಳಲ್ಲಿವೆ. ಗುಡಿಯ ಹೊರಮಗ್ಗಲು ಅಲ್ಲಲ್ಲಿ ಗೂಡುಗಳನ್ನು ಮಾಡಿದ್ದು ಅದರಲ್ಲಿ, ಬಿಕ್ಷಾಟನಾ ಶಿವ, ಜಟಾಧಾರಿ ಶಿವ, ಶಿವಮೂರ್ತಿ, ಕರಂಡಮುಕುಟಶಿವ, ಅರ್ಧನಾರೀಶ್ವರ, ಜಟಾ ಮಂಡಲ ಶಿವ,

ಜಟಾಭಾರ ಶಿವರನ್ನು ಅತ್ಯಂತ ಆಕರ್ಷಕವಾಗಿ, ಅಲಂಕಾರಿತವಾಗಿ ಕೆತ್ತಿದ್ದಾರೆ. ಪುಷ್ಪಲಂಕಾರಿ, ಹಂಸಗಳ ಸಾಲು, ಹಾವಾಡಿಗ, ನಾಗಕುಬ್ಜ ಗಣಗಳು, ಮಕರಯಾಲ, ಸಂಗೀತ ಮೇಳದಲ್ಲಿ ವಾದ್ಯಗಳ ವೈವಿಧ್ಯತೆ, ದೇವಾಸುರರ ಯುದ್ಧ ಚಿತ್ರಗಳು, ಆನೆ, ಕುದುರೆಗಳ ಸಾಲು, ಮದನಿಕೆಯರ ಮಾದಕ ಕಾಮರೂಪಿ ದೃಶ್ಯಗಳು ನೃತ್ಯ ದೃಶ್ಯಗಳು, ರಾಮಾಯಣ, ಮಹಾಭಾರತದ ಚಿತ್ರಗಳನ್ನು ಕಾಣಬಹುದು. ಈ ಎಲ್ಲ ಮೂರ್ತಿಗಳು ಗಾತ್ರದಲ್ಲಿ ಚಿಕ್ಕವುಗಳಾಗಿದ್ದರೂ ರೂಪಾಲಂಕಾರದಲ್ಲಿ ಚೇತೋಹಾರಿಯಾಗಿವೆ. ಈ ಶಿಲ್ಪಗಳನ್ನು ಮೂರು ಪಟ್ಟಿಕೆಗಳಲ್ಲಿ ಗುಡಿಯ ಹೊರಮಗ್ಗಲು ಕೆತ್ತಿದ್ದಾರೆ. ಗುಡಿಯ ದಕ್ಷಿಣ ಗೋಡೆಯಲ್ಲಿ ನಾಲ್ಕು ವಾತಾಯಣಗಳಿವೆ. ಅವುಗಳ ಮೇಲೆ ದ್ರವಿಡ ವಿಮಾ ಶೈಲಿಯಲ್ಲಿ ಕೆತ್ತಿವ ಚಿಕ್ಕ ಮಂದಿರಗಳು ಬೃಹನ್ಮಂದಿರಗಳ ನಿರ್ಮಾಣದ ರೂಪರೇಷೆಗಳಂತಿವೆ. ಪ್ರದಕ್ಷಿಣೆ ಹಾಕುವಾಗ ವಾಸ್ತುಶಿಲ್ಪದ ಸೌಂದರ್ಯವನ್ನು ಸವಿಯುತ್ತ ಸಾಗಬಹುದು. ಗುಡಿಯ ನಿರ್ಮಿತಿಯಲ್ಲಿ ಬಳಸಿದ ಉಸುಕು ಕಲ್ಲಿನ ನಿಮಿತ್ಯ ಕೆಲವು ಕಲಾತ್ಮಕ ಶಿಲ್ಪ ಪಟ್ಟಿಕೆಗಳು ಸಂಪೂರ್ಣ ನಾಮಾವಶೇಷವಾಗಿವೆ.

ಕೆಲವು ಅರ್ಧಮರ್ಧ ಹಾಳಾಗಿವೆ. ಅಳಿದುಳಿದ ಶಿಲ್ಪಕ್ಕೆ ಧಕ್ಕೆಯಾಗದಂತೆ ನೋಡಿಕೊಂಡು ಹೋಗಬೇಕು. ಗುಡಿಗೆ ಸುಣ್ಣ ಬಣ್ಣ ಬಳಿದಿರುವುದರಿಂದ ಶಿಲ್ಪಿಗಳ ಅಂದಕ್ಕೆ ಕುಂದಾಗಿದೆ.

ಇಂದಿನ ಕಾಲದ ಯಾವುದೇ ಆಧುನಿಕ ಸೌಲಭ್ಯವಿಲ್ಲದಿದ್ದಾಗಲೂ ಅಂದಿನ ಕಾಲದಲ್ಲಿ ಇಷ್ಟೊಂದು ದಪ್ಪಕಲ್ಲಿನ ಚಪ್ಪಡಿಯನ್ನು ದೇವಸ್ಥಾನದ ಮಾಳಿಗೆಗೆ ಹೇಗೆ ಹೊರಿಸಿದರೆಂಬುದೇ ಆಶ್ಚರ್ಯ. ಅಂದಿಗೂ ಇಂದಿಗೂ ಶಿಲ್ಪಿಗಳ ಚಾತುರ್ಯವನ್ನು ಅವಲೋಕಿಸಿದರೆ ಅಜಗಜಾಂತರ ವ್ಯತ್ಯಾಸ ಕಾಣುತ್ತದೆ. ಅಂದಿನ ಪ್ರಬುದ್ಧತೆ, ಪರಿಪಕ್ವತೆ ಇಂದು ಕಾಣಲು ಆಗುತ್ತಿಲ್ಲ. ಅಂದಿನ ಶಿಲ್ಪಿಗಳ ಶ್ರದ್ಧೆ, ಕಲಾ ಪ್ರೌಢಿಮೆ ಇಂದು ಅಪರೂಪವಾಗುತ್ತಿದೆ.

ಔತ್ತರೇಯ ಶೈಲಿಯ ಸಂಗಮೇಶ್ವರ ದೇವಾಲಯ ಪೂರ್ವಾಭಿಮುಖವಾಗಿದೆ. ಜಗತ್ ಸೃಷ್ಟಿಗೆ ಕಾರಣರಾದ ಶಿವಶಕ್ತಿಯರನ್ನು ಒಂದುಗೂಡಿಸಿ ಕೆತ್ತಿದ ಅರ್ಧನಾರೀಶ್ವರ ವಿಗ್ರಹ ಬಹು ಸುಂದರವಾಗಿದೆ. ಅಪಸ್ಮಾರ ಪೂರುಷನನ್ನು ತುಳಿದು ಸಮಭಂಗಿಯಲ್ಲಿ ನಿಂತಿರುವ ಊರ್ಧ್ವರೇತೇಶ್ವರ ಶಿಲ್ಪ ಮನೋಹರವಾಗಿದೆ. ದ್ರಾವಿಡ ವಿಮಾನ ಶೈಲಿಯಲ್ಲಿ ಪ್ರಾಂಗಣದ ದಕ್ಷಿಣಕ್ಕೆ ಇರುವ ದೇವಾಲಯವೇ ಮಲ್ಲಿಕಾರ್ಜುನ. ಮುಖಮಂಟಪ, ಸಭಾಮಂಟಪ, ಪ್ರದಕ್ಷಣಾ ಪಥ, ಗರ್ಭಗೃಹಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ದೊಡ್ಡ ಲಿಂಗ ಇದೆ. ಮುಖಮಂಟಪದಲ್ಲಿ ದ್ವಾರಪಾಲಕರ ಮೂರ್ತಿಗಳಿವೆ. ವೈವಿಧ್ಯಮಯ ಶಿಲ್ಪಗಳು ಈ ಗುಡಿಯಲ್ಲಿದ್ದರೂ, ಬೆಳಕಿನ ಅಭಾವದಿಂದ, ಭಕ್ತರು ಅಡುಗೆ ಮಾಡುವಾಗ ಎದ್ದ ಹೊಗೆಯಿಂದ ಕಪ್ಪಿಟ್ಟು ಹೋಗಿರುವುದರಿಂದ ಬೇಗನೆ ಗೋಚರಿಸುವದಿಲ್ಲ.

ಮಹಾಕೂಟ ಕ್ಷೇತ್ರದ ಒಳ ಪ್ರಾಕಾರದಲ್ಲಿ ಇಪ್ಪತ್ತೆರಡಕ್ಕೂ ಹೆಚ್ಚು ಗುಡಿಗಳಿವೆ.

ಮಂಟಪಗಳಿವೆ. ಭಗ್ನಗೊಂಡ ತುಂಡು ತುಂಡು ಮೂರ್ತಿಗಳಿವೆ. ಎಲ್ಲ ಗುಡಿಗಳಲ್ಲೂ ವಿಶೇಷವಾಗಿ ಅರ್ಧನಾರೀಶ್ವರ, ಊರ್ಧ್ವರೇತೇಶ್ವರ, ಉಗ್ರನರಸಿಂಗ, ಸ್ತ್ರೀಪುರುಷರ ಸುಂದರ ಚಿತ್ರಗಳು, ಶಿವನ ಅವತಾರಗಳು, ಯುದ್ಧ ಪ್ರಸಂಗಗಳು, ನೃತ್ಯ ಪ್ರಕಾರಗಳು, ವಾದ್ಯ ಮೇಳದವರು, ಅಲಂಕಾರದ ಮೂರ್ತಿಗಳುಆಕರ್ಷಕವಾಗಿವೆ. ಕೆಲವು ಗುಡಿಗಳು ಔತ್ತರೇಯಲ್ಲಿ ಕಟ್ಟಲ್ಪಟ್ಟದ್ದರೆ, ಮತ್ತೆ ಕೆಲವು ದ್ರಾವಿಡ ಶೈಲಿಯಲ್ಲಿವೆ. ಲಕುಲೀಶ, ಗೌರಮ್ಮ, ಸರಸ್ವತಿ ದೇವಾಲಯದ ಸರಸ್ವತಿ ಮೂರ್ತಿ ಬಲು ಆಕರ್ಷಕವಾಗಿವೆ. ವೀರಭದ್ರೇಶ್ವರ ಗುಡಿಯಲ್ಲಿ ವೀರಭದ್ರನ ಮೂರ್ತಿ, ವೇಣುಗೋಪಾಲ ಮೂರ್ತಿ, ಮನಮೋಹಕವಾಗಿವೆ. ಪ್ರಾಂಗಣದಲ್ಲಿ ಲಜ್ಜಾಗೌರಿಯ ಪ್ರತಿಮೆ ಭಗ್ನಗೊಂಡಿದೆ. ಗೌರಿಯ ಮುಖವು ಕಮಲದ ಹೂವಿನಿಂದ ಕೂಡಿದ್ದು ಉಳಿದ ಭಾಗ ನಗ್ನ ಹೆಣ್ಣಿನ ದೇಹವಾಗಿದೆ. ಈ ಲಜ್ಜಾಗೌರಿಯ ಮೂರ್ತಿ ಪೂಜೆಯಿಂದ ಸಂತಾನ ಪ್ರಾಪ್ತಿಯಾಗುವದೆಂಬ ನಂಬಿಕೆ ಜನರಲ್ಲಿದೆ. ದಕ್ಷಿಣ ದಿಕ್ಕಿನ ದ್ವಾರಬಾಗಿಲ ಎಡಬಲಕ್ಕೆ ದ್ವಾರಪಾಲಕರಿದ್ದಾರೆ. ಅಸ್ತಿಪಂಜರ ಎದ್ದುಕಾಣುವ ಈ ಮೂರ್ತಿಗಳು ಕಾಳಾಮುಖರ ಪ್ರತಿಮೆಗಳೆಂದು ಇತಿಹಾಸ ಸಂಶೋಧಕರ ಅಭಿಪ್ರಾಯ. ಇದರಿಂದ ದಕ್ಷಿಣ ಭಾರತದಲ್ಲಿ ೬ನೇ ಶತಮಾನದಲ್ಲಿಯೇ ಶೈವಪಂಗಡವಿತ್ತೆಂದು ಸ್ಪಷ್ಟವಾಗುವದು.

ತೀರ್ಥಗಳು:

೧) ವಿಷ್ಣುಪುಷ್ಕರಣೀ ತೀರ್ಥ: ಇದು ಮಹಾಕೂಟೇಶ್ವರ ದೇವಾಸ್ಥನ ದಕ್ಷಿಣಕ್ಕಿದೆ. ಇದರ ಪೂರ್ವಕ್ಕಿರುವ ಕೋಡಿಯಿಂದ ಸತತವಾಗಿ ನೀರು ಹರಿಯುತ್ತಿದ್ದರೂ, ನೀರಿನ ಪ್ರಮಾಣ ಮಾತ್ರ ಎಷ್ಟೂ ಕಡಿಮೆಯಾಗುವುದಿಲ್ಲ. ಇದು ಸುತ್ತಮುತ್ತಲಿನ ತೋಟ ಪಟ್ಟಗಳ ಹಸಿರಿಗೆ ಉಸಿರಾಗಿದೆ. ಇದರಲ್ಲಿ ಹನ್ನೆರಡು ತಿಂಗಳೂ ಒಂದೇ ಪ್ರಮಾಣದಲ್ಲಿ ನೀರು ಇರುವುದು ಒಂದು ವೈಶಿಷ್ಟ್ಯ. ಮಹಾಕೂಟದಲ್ಲಿದ್ದ ಸಿಂಹಾಸುರನ ವಧೆಗಾಗಿ ಶಿವನು ವಿಷ್ಣುರೂಪದಿಂದ ಬಂದು, ಸಿಂಹಾಸುರನ ವಧೆಯಾದ ಮೇಲೆ, ವಿಷ್ಣುರೂಪದಲ್ಲಿದ್ದ ಶಿವನು ಈ ಹೊಂಡದಲ್ಲಿ ಅದೃಶ್ಯನಾದನೆಂದು ಪುರಾಣಗಳು ಹೇಳುತ್ತವೆ. ಅಂದಿನಿಂದ ಈ ಪುಷ್ಕರಣಿಗೆ ಶಿವನೇ ವಿಷ್ಣು ರೂಪದಲ್ಲಿ ಬಂದುದರ ದ್ಯೋತಕವಾಗಿ ವಿಷ್ಣುಪುಷ್ಕರಣೀತೀರ್ಥವೆಂತಲೂ, ವಿಷ್ಣುರೂಪದಲ್ಲಿದ್ದವನು ಶಿವನೇ ಇದ್ದುದರ ಕುರುಹಿಗಾಗಿ ಶಿವಪುಷ್ಕರಣೀ ತೀರ್ಥವೆಂತಲೂ ಹೆಸರು ಬಂದಿರಬೇಕು. ಏನೇ ಇರಲಿ ಇದು ಶಿವ-ವಿಷ್ಣುಗಳ ಅಭೇದತ್ವದ ಪ್ರತೀಕವಾದ ಮಹತ್ವದ ತೀರ್ಥವಾಗಿದೆ.

''ಏಕೊಂ ದೇವಪ್ಪರಮಶಿವ। ಪಂಚಭೂತಾತ್ ಪ್ರತಿನಿಧಿತ॥

ಚ ಸರ್ವಭೂತಾಂರರಾತ್ಮಕ। ಏವ।'' ಸಕಲ ಜೀವಿಗಳಿಗೆ ಚೈತನ್ಯ ಸಾಕ್ಷಿಯಾಗಿರುವ ಪಂಚಭೂಲಗಳ ಒಬ್ಬುಳಿಯಂತಿರುವ ಚತುರ್ಮುಖ ಲಿಂಗವು ಸುಂದರ ಶಿಲಾಮಂಟಪದಲ್ಲಿ ಇದ್ದು, ಆ ಲಿಂಗಕ್ಕೆ ಜಲಾಭಿಷೇಕವನ್ನು ಮಾಡಿ, ಸ್ನಾನ ಗೈದರೆ ಪಾಪನಾಶವಾಗಿ ಕೋಟಿ ಲಿಂಗಗಳನ್ನು ಪೂಜಿಸಿದ ಫಲವು ಲಭಿಸುವುದು.

೨) ಕೋಣೇ ಶಂಕರ ತೀರ್ಥ: ಇದು ವಿಷ್ಣು ಪುಷ್ಕರಣಿಗೆ ಹೊಂದಿ ವಾಯುವ್ಯ ಮೂಲೆಯಲ್ಲಿರುವ ಕೋಣೆಯಂತಹ ಕುಂಡ. ಇದಕ್ಕೆ ಗುಪ್ತ ಶಂಕರಲಿಂಗ ಎಂತಲೂ ಹೆಸರು. ಇಲ್ಲಿ ಶಂಕರನು ಅದೃಶ್ಯನಾಗಿರುವನು. ಆದ್ದರಿಂದ ಈ ತೀರ್ಥಕ್ಕೆ ಆ ಹೆಸರು. ವಿಷ್ಣು ಪುಷ್ಕರಣಿಯ ವಾಯುವ್ಯ ದಿಕ್ಕಿನಲ್ಲಿಯ ಜಲಮಾರ್ಗದ ಬಾಗಿಲದಿಂದ ಪ್ರವೇಶಿಸಿದರೆ, ಗರ್ಭಗೃಹ, ಮುಖಮಂಟಪವಿರುವ ಚಿಕ್ಕ ಗುಡಿಯಲ್ಲಿಯ ಜಲಾಂತರ್ಗತ ಲಿಂಗ ಕಾಣಿಸುವುದು. ಇದೇ ಶಂಕರಲಿಂಗ. ಇದು ಬೊಗಸೆ ನೀರೆರೆದರೆ ಪಾಪ ವಿಮೋಚನೆಯಾಗಿ ಇಷ್ಟ ಸುಖ ಸೌಭಾಗ್ಯ ಪಡೆಯಬಹುದೆಂಬ ನಂಬಿಕೆ ಭಕ್ತಾಧಿಗಳಲ್ಲಿದೆ. 'ವಿಕಲ್ಪ ಜಾಲವನು ಭೇದಿಸಿ, ತ್ರಿಕೂಟ ಸ್ಥಾನದಲ್ಲಿ ದೃಢವಾದ ಬಂಧನಮಂ ಮಾಡಿ, ತ್ರಿಕೋಣ ಸ್ಥಾನದಲ್ಲಿ ಮನ। ಪ್ರಾಣಂಗಳೊಡನೆ ಕೂಡೆಯ್ದಿ ನಾಸಿಕಾಗ್ರದಲ್ಲಿಯ ನಾದ ಬ್ರಹ್ಮಾತ್ಮಕಮಪ್ಪ ಸೂಕ್ಷ್ಮ ಕುಂಡಲಿಯನು ಭೇದಿಸಿ ಸುಷುಮ್ನಾ ಸ್ಥಾನದೊಳಿಲೆ ಶಿಷ್ಯನೆ ಆನಂದ ಸ್ವರೂಪನಾಗಿರು, ಎಂದು 'ಪಾರಮಾರ್ಥ ಪ್ರಕಾಶಿಕೆ' ಯಲ್ಲಿ ಗುರುವಿನ ಬೋಧ ಪ್ರಕಾರವನ್ನು ಹೇಳಿರುವುದು ಮಹಾಕೂಟದಲ್ಲಿರುವ ಕೋಣೆ ಶಂಕರನನ್ನು ಸಂಕೇತಿಸುವಂತಿದೆ. ಖೇಚರೀ ಮುದ್ರೆಯಿಂದ ಯೋಗಿಯು ಮನಸ್ಸನ್ನು ತ್ರಿಕೂಟ ಸ್ಥಾನದಲ್ಲಿ ನಿಲ್ಲಿಸಿ ಸಮಾಧಿ ಯೋಗವನ್ನು ಸಾಧಿಸುತ್ತಾನೆ. ಮಹಾಕೂಟವು ಚಾಲುಕ್ಯರಿಗಿಂತಲೂ ಪೂರ್ವದಲ್ಲಿ ಮಹಾಶೈವಾಚಾರ್ಯರಾದ ಲಕುಲೀಶ ಸಿದ್ಧಯೋಗಿಗಳ ಆಶ್ರಮವಾಗಿದ್ದಿತು. ಅಲ್ಲಿಯ ಸುತ್ತ ಇರುವ ಶಿವಲಿಂಗಗಳೆಲ್ಲ ಆ ಯೋಗಿಗಳ ಅಭಿಧಾನವನ್ನೇ ತಾಳಿವೆ. ಮಹಾಕೂಟದ ಆವರಣವಲ್ಲಿ ಅಲ್ಲಲ್ಲಿ ಜಡೆ, ಲಕುಲ (ದಂಡ) ಧಾರಿಗಳಾದ ಯೋಗಿಗಳ ಮೂರ್ತಿಗಳನ್ನು ಕೆತ್ತಿರುವುದೇ ಇದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

೩) ಔದುಂಬರ ತೀರ್ಥ: ಇದು ಮಹಾಕೂಟೇಶ್ವರ ದೇವಾಲಯದ ಆವರಣ ಹೊರಗೆ ಆಗ್ನೇಯ ದಿಕ್ಕಿಗೆ ಇದೆ. ಇದರ ದಂಡೆಯ ಮೇಲೆ ಹಳೇ ಅತ್ತಿಮರವಿದ್ದುದರಿನವ ಇದಕ್ಕೆ ಔದುಂಬರ ತೀರ್ಥ ವೆಂತಲೂ, ಹಿಂದೆ ಕಾಶೀರಾಜನ ಮಗಳಾದ ದಿವ್ಯಾದೇವಿಯು ತನ್ನ ಮಂಗನ ಮೋರೆಯನ್ನು ನೀಗಿ ಸುಂದರ ಸ್ತ್ರೀ ಮುಖವನ್ನು ಪಡೆದುದಕ್ಕೆ ಈ ತೀರ್ಥದ ಪ್ರಭಾವವೇ ಕಾರಣವಾದುದರಿಂದ ಇದಕ್ಕೆ 'ಕಾಶೀ ಹೊಂಡ' ವೆಂತಲೂ, ಹೊಂಡದ ಪೂರ್ವದಂಡೆಯಲ್ಲಿ ಗಣೇಶಮೂರ್ತಿ ಇರವುದರಿಂದ ಇದಕ್ಕೆ 'ಗಣೇಶ ಹೊಂಡ' ವೆಂತಲೂ ಹೆಸರುಗಳು ಬಂದಿವೆ. ಮಹಾ ಕೂಟ ಕ್ಷೇತ್ರಕ್ಕೆ ಬಂದವರು ಮೊದಲು ಈ ಹೊಂಡದಲ್ಲಿ ಮಿಂದು ನಂತರ ದೊಡ್ಡ ಹೊಂಡ (ವಿಷ್ಣುಪುಷ್ಕರಣಿ)ದಲ್ಲಿ ಸ್ನಾನ ಮಾಡುವ ಪದ್ಧತಿಯು ಈಗಲೂ ಇದೆ.

ಶೈವ ಧರ್ಮದ ಪವಿತ್ರ ಪುಣ್ಯ ಕ್ಷೇತ್ರ ದಕ್ಷಿಣಕಾಶಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಮಹಾಕೂಟೇಶ್ವರನಿಗೆ ತ್ರಿಕಾಲ ಪೂಜೆ ನಡೆಯುವುದು. ಪ್ರತಿ ಅಮವಾಸ್ಯೆ, ಹುಣ್ಣಿಮೆ ಹಾಗೂ ಶ್ರಾವಣ ಮಾಸದಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತರು ಬರುವರು. ಆಶ್ವಿಜ ಮಾಸದ ಕೃಷ್ಣಪಕ್ಷ ಚತುರ್ದಶಿ ಅಂದರೆ ದೀಪಾವಳಿ ಅಮವಾಸ್ಯೆಯ ಮೊದಲು, ಮಾಘಮಾಸದ ಶುದ್ಧ ಚತುರ್ದಶಿ ಅಂದರೆ ಭಾರತಹುಣ್ಣಿಮೆಯ ಮೊದಲು, ಫಾಲ್ಗುಣ

ಮಾಸದ ಕೃಷ್ಣ ಪಕ್ಷದ ಚತುರ್ದಶಿ ಅಂದರೆ ಯುಗಾದಿ ಅಮವಾಸ್ಯೆಯ ಮೊದಲು ಹೀಗೆ ವರ್ಷದಲ್ಲಿ ಮೂರು ಸಾರೆ ರಾತ್ರಿ ದೀಪಾರಾಧನೆ ನಡೆಯುವುದು. ಕಾರ್ತಿಕ ಮಾಸದ ಲಕ್ಷ ದೀಪೋತ್ಸವ ಆಕರ್ಷಕ ವಾಗಿರುತ್ತದೆ. ವೈಶಾಖ ಶುದ್ಧ ಪೌರ್ಣಮೆಯೆಂದು ಹೂವಿನ ರಥ ಮತ್ತು ಮರುದಿನ ಗಡ್ಡಿ ತೇರಿನ ರಥೋತ್ಸವ ಜರುಗುವುದು. ಶ್ರಾವಣ ಮಾಸದಲ್ಲಿ ಒಂದು ತಿಂಗಳವರೆಗೆ ಗಣಾರಾಧನೆ ವಿಶೇಷ ರೀತಿಯಲ್ಲಿ ನಡೆಯುವುದು. ಮಹಾಕೂಟದೇವಾಲಯದ ಸಮಿಪದಲ್ಲಿ ಹಳೆಯ ಮಹಾಕೂಟ ದೇವಾಲಯವೊಂದಿದೆ. ಇಲ್ಲಿ ಗಜಪೃಷ್ಠಾಕಾರದ ಚಿಕ್ಕ ದೇವಾಲಯಗಳು ಚಾಲುಕ್ಯ ವಾಸ್ತುಶಿಲ್ಪದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿವೆ. ಈ ದೇವಾಲಯವು ಭಕ್ತರಿಂದ, ಪ್ರವಾಸಿಗರ ದೃಷ್ಠಿಯಿಂದ ದೂರ ಉಳಿದಿದೆ. ಅಲ್ಲಿ ಜೀರ್ಣೋದ್ಧಾರ ಕೆಲಸವಾಗಬೇಕು. ಸಂಪರ್ಕ ಸಾಧನೆಗಳ ವ್ಯವಸ್ಥೆಯಾಗಬೇಕು. ಪ್ರೇಕ್ಷಣೀಯ ಸ್ಥಳವಾಗಿ ಪ್ರಚಾರ ಪಡೆಯಬೇಕು.

ಮಹಾಕೂಟ ನಮ್ಮ ನಾಡಿನ ಅತೀ ಪ್ರಾಚೀನವಾದ ಮತ್ತು ಪವಿತ್ರವಾದ ಕ್ಷೇತ್ರ. ಸ್ಕಾಂದ ಪುರಾಣೋಕ್ತಿಯಂತೆ ದಕ್ಷಿಣ ಕಾಶಿಯೆಂದು ಸುಪ್ರಸಿದ್ಧವಾಗಿದೆ. ಮಹಾಕೂಟ- ಇದು ಪುಣ್ಯದ ನೆಲವನೆ, ಸರ್ವಸಿದ್ಧಿಯ ಪಂಜರ, ಸರಳ ಹೃದಯದ ಬೀಡು, ಯೋಗೀಶ್ವರರ ಆಡುಂಬೊಲ ಮತ್ತು ಮುಕ್ತಿಕಾಂತೆಯ ತವರುಮನೆಯಾಗಿ ಜನರ ಹೃನ್ಮನಗಳನ್ನು ಸೂರೆಗೈದಿದೆ.

ಕಲಾಪ್ರೇಮಿಗಳ ಕಾಶಿ - ಪಟ್ಟದಕಲ್ಲು

ಕರ್ನಾಟಕದ ಹೆಮ್ಮೆಯ ಕಲಾ ಕೇಂದ್ರವಾದ ಪಟ್ಟದಕಲ್ಲಿನ ಚಾಲುಕ್ಯ ದೇವಾಲಯಗಳನ್ನು ಶಿಲ್ಪ, ವಾಸ್ತು ಮತ್ತು ನಿರ್ಮಾಣ ಕೌಶಲ್ಯಕ್ಕೆ ಅಮೋಘ ಕಾಣಿಕೆಗಳೆಂದು ಪರಿಗಣಿಸಿ, ವಿಶ್ವ ಸಾಂಸ್ಕೃತಿಕ ಸ್ಮಾರಕಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಅಂತಾರಾಷ್ಟ್ರೀಯ ಮಾನ್ಯತೆ ಪಡೆದಿರುವ ಈ ಶಿಲಾ ಕಲಾಕೇಂದ್ರ ಕನ್ನಡಿಗರ ಹೆಮ್ಮೆಯ ಸಂಕೇತವಷ್ಟೇ ಆಗಿರದೆ, ಈಗ ನಾಡಿನಾಚೆಗೂ ತನ್ನ ಖ್ಯಾತಿಯ ಕೈ ಚಾಚಿದೆ. ವಾಸ್ತು ಶಿಲ್ಪ ಕಲೆಯ ಉತ್ತುಂಗ ತಲುಪಿರುವ ಪಟ್ಟದಕಲ್ಲಿನ ದೇವಾಲಯಗಳು ನಿಜಕ್ಕೂ ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆಯ ಶ್ರೀಮಂತ ಪ್ರತಿನಿಧಿಗಳು.

ಚರಿತ್ರೆಯ ಪುಟಗಳಲ್ಲಿ

ಚಾಲುಕ್ಯರ ಕಾಲದಲ್ಲಿ ಈ ಊರಿಗೆ 'ಕಿಸುವೊಳಲ್' ಅಥವಾ 'ಪಟ್ಟದ ಕಿಸುವೊಳಲ್' ಎಂಬ ಹೆಸರು ರೂಢಿಯಲ್ಲಿತ್ತೆಂದು ಲಕ್ಷ್ಮೇಶ್ವರದಲ್ಲಿಯ ಚಾಲುಕ್ಯ ವಿನಯಾದಿತ್ಯರ ಶಾಸನ ಹೇಳುತ್ತದೆ. ಕಾವೇರಿಯಿಂದ ಗೋದಾವರಿವರೆಗಿದ್ದ ಕನ್ನಡ ನಾಡಿನ ಕೇಂದ್ರದ ತಿರುಳ್ಗನ್ನಡದ ಸೀಮಾರೇಖೆಯನ್ನು 'ಕವಿರಾಜ ಮಾರ್ಗ' (ಕ್ರಿ.ಶ. ೮೧೫-೮೭೭)ದಲ್ಲಿ ನಾಲ್ಕು ಊರುಗಳಿಂದ ಸೂಚಿಸಿದೆ. ಆ ಊರುಗಳೆಂದರೆ ಈಗಿನ ಲಕ್ಷ್ಮೇಶ್ವರ, ಒಕ್ಕಂದ (ಒಂಕುಂದ), ಕೊಪ್ಪಳ (ಕೊಪಣ) ಮತ್ತು ಪಟ್ಟದಕಲ್ಲು (ಕಿಸುವೊಳಲ್):

''...ಅದರೊಳಗಂ ಕಿಸುವೊಳ್'' ಲಾ।

ವಿದಿತಮಹಾ ''ಕೊಪಣ'' ನಗರದಾ ''ಪುಲಿಗೆಯಾ॥

ಸದಭಿಸ್ತುತ'' ವೊಂಕುಂದ।

''ದ ನಡುವಣ ನಾಡೆ, ನಾಡೆ ಕನ್ನಡದ ತಿರುಳ್''.

ಇದರಿಂದ ಈ ಗ್ರಂಥ ರಚನೆಯ ಕಾಲಕ್ಕೆ ಪಟ್ಟದಕಲ್ಲು ಕನ್ನಡನಾಡಿನ ಗಣ್ಯ ನಗರವಾಗಿತ್ತೆಂದು ಸಿದ್ಧವಾಗುತ್ತದೆ. ಎರಡನೇ ಚಾವುಂಡನ ಶಾಸನವು ಈ ಊರನ್ನು ಚೆನ್ನಾಗಿ ವರ್ಣಿಸಿದೆ -

''ಕಿಸುಕಾಡು ಕುಂತಲ ದೇಶವೆಂಬ ಕಾಂತೆಯ ಹಣೆಯಂತಿತ್ತು. ಅಂತಹ ಚೆಲುವಾದ ನಾಡಿಗೆ ಕಿಸುವೊಳಲ್ ಪಟ್ಟಣವು ಅಮೂಲ್ಯ ರತ್ನದಂತಿತ್ತು''. ಪ್ರಾಗೈತಿಹಾಸಿಕ ಕಾಲದಿಂದಲೂ ಇಲ್ಲಿ ಮಾನವನ ಚಟುವಟಿಕೆಗಳಿದ್ದ ಕುರುಹುಗಳು ಇಲ್ಲಿನ ಶಿಲಾಗೋರಿಗಳ ಅವಶೇಷಗಳಲ್ಲಿ ಕಂಡುಬರುತ್ತವೆ. ಈ ಊರನ್ನು 'ಪಟ್ಟಶಿಲಾಪುರ', 'ಹಮ್ಮಿರಪುರ' ಎಂದೂ ಕರೆಯುತ್ತಿದ್ದರೆಂಬುದು ಕ್ರಿ.ಶ. ೧೫೪೦ರಲ್ಲಿ ಮುರಿಗೆ ಶಾಂತವೀರ ದೇಶಿಕೇಂದ್ರ ಕವಿಯಿಂದ ವಿರಚಿತವಾದ ಹಮ್ಮಿರ ಕಾವ್ಯದಿಂದ ಸ್ಪಷ್ಟವಾಗುತ್ತದೆ. ಆಗ ಇದು ಮನುರಾಜೇಂದ್ರ (ಅನಿಮಿಷ)ನ ರಾಜಧಾನಿಯಾಗಿತ್ತು. ಹಮ್ಮಿರ ಕಾವ್ಯದಲ್ಲಿ ಪಟ್ಟದಕಲ್ಲ

ವರ್ಣನೆ ಮಾರ್ಮಿಕವಾಗಿ ಮೂಡಿಬಂದಿದೆ.

''ದೇಶ ಮಧ್ಯದೊಳ್ ಮಹಿಮೆಯ ನಾಡು, ಸೌಖ್ಯದ ಸದನಂ,
ಭೂಮಿಯ ವದನಂ, ಸತ್ಯದ ನೆಲೆ ನಿತ್ಯದ ನಿಜವಾಗಿ
ಮನುರಾಜನ ದೇಶಮಿರ್ದುದು...''

ಇಲ್ಲಿ ಯುವರಾಜ ಪಟ್ಟಾಭಿಷೇಕವಾದ ನಂತರವೇ ಸಿಂಹಾಸನವನ್ನೇರುತ್ತಿದ್ದ. ಭುವನಯ್ಯ ಮಲ್ಲ. ದೇವನ ಶಾಸನ - ''ಮಹಾವೀರ ಸಿಂಹಾಸನ ಶ್ರೀ ಚಾಳುಕ್ಯಾನ್ವಯ ಪಟ್ಟಬಂಧನೋತ್ಸಾಹಾಸ್ಪಕಳ ವಿಷಯ ಪಟಣಾಧಿಪತಿ ಶ್ರೀಮತ್ಕಿಸುವೊಳಲ...'' ಎಂದು ಹೇಳಿದೆ. ಈ ಪಟ್ಟ ಬಂಧೋತ್ಸವಕ್ಕೆ ಕಾರಣ ಈ ಸ್ಥಾನವು ಪವಿತ್ರವಾದುದು ಎಂಬ ಭಾವನೆ. ಇದರಿಂದಾಗಿ ಈ ಊರಿಗೆ 'ಪಟ್ಟದಕಲ್' ಎಂದು ಹೆಸರು ಬಂದಿರಬಹುದೆಂದು ಕೆಲವು ಸಂಶೋಧಕರ ತರ್ಕ. ಕ್ರಿ.ಶ.೧೫೦ರ ಸುಮಾರಿಗೆ ನಮ್ಮ ದೇಶದಲ್ಲಿ ಸಂಚರಿಸಿದ ಗ್ರೀಸ್‌ನ ಟೊಲೆಮಿಯ ವರದಿಯ ಪ್ರಕಾರ 'ಪೆರ್ತಗಲ್' ಎಂಬುದು ಈ ಊರ ಮೂಲ ಹೆಸರು. ಕಾಲಾಂತರದಲ್ಲಿ ಇದು ಪಟ್ಟದಕಲ್ಲು ಆಯಿತೆಂದು ಮತ್ತೆ ಕೆಲವರ ವಾದ.

ವಾಸ್ತುಶಿಲ್ಪ ವೈಭವಃ

ವಾಸ್ತುಶಿಲ್ಪ ಬೆಳವಣಗೆಯ ಇತಿಹಾಸದಲ್ಲೂ ಪಟ್ಟದಕಲ್ಲಿಗೆ ವಿಶೇಷ ಸ್ಥಾನವಿದೆ. ಭಾರತದಲ್ಲಿ ಪ್ರಚಾರವಾದ ಎರಡು ಪ್ರಮುಖ ಶಿಲ್ಪ ಶೈಲಿಗಳೆಂದರೆ- 'ದ್ರಾವಿಡ ವಿಮಾನ' ಮತ್ತು 'ನಾಗರ ರೇಖಾ ಪ್ರಸಾದ' ಶೈಲಿಗಳು. ದ್ರಾವಿಡ ವಿಮಾನ ಶೈಲಿಯ ದೇವಾಲಯಗಳು ಕಂಚಿ, ಮಹಾಬಲಿಪುರಂ ಮುಂತಾದ ಕಡೆಗಳಿಗಿದ್ದರೆ, ನಾಗರ ರೇಖಾ ಪ್ರಸಾದ ಶೈಲಿಯ ದೇವಾಲಯ ಪುರಿ (ಒರಿಸ್ಸಾ)ಯಲ್ಲಿದೆ. ಇವೆರಡೂ ಶೈಲಿಗಳ ಶಿಲ್ಪಗಳನ್ನು ನೋಡುವ ಏಕ ಮಾತ್ರ ಸ್ಥಳ ಪಟ್ಟದಕಲ್ಲು. ಇದನ್ನು ಯುನೆಸ್ಕೊ ''ದೇವಾಲಯಗಳ ವಾಸ್ತು ಶಿಲ್ಪ ಶೈಲಿಯ ಸಂಗ್ರಹಾಲಯ'' ಎಂದು ಗುರುತಿಸಿರುವುದು ಔಚಿತ್ಯಪೂರ್ಣವಾಗಿದೆ.

ನಾಗರ ರೇಖಾ ಪ್ರಸಾದ ಶೈಲಿಯ ಗೋಪುರವು ದ್ರಾವಿಡ ವಿಮಾನ ಶೈಲಿ ಹಾಗೂ ಸ್ಥಳೀಯ ಮಂಟಪ ಶೈಲಿಯ ಕಟ್ಟಡಗಳಿಗೆ ಹೇಗೆ ಕಾಣಬಹುದೆಂಬುದನ್ನು ಪಾಪನಾಥ, ಗಳಗನಾಥ ದೇವಾಲಯಗಳ ಕಟ್ಟಡಗಳಲ್ಲಿ ಶಿಲ್ಪ ಪ್ರಯೋಗ ಮಾಡಿ ನೋಡಿದಂತಿದೆ. ದ್ರಾವಿಡ ವಿಮಾನ ಶೈಲಿಯಲ್ಲಿ ಸಂಗಮೇಶ್ವರ (ವಿಜಯೇಶ್ವರ), ವಿರೂಪಾಕ್ಷ (ಲೋಕೇಶ್ವರ), ಮಲ್ಲಿಕಾರ್ಜುನ (ತ್ರೈಲೋಕೇಶ್ವರ), ಜೈನ ದೇವಾಲಯಗಳಿದ್ದರೆ, ನಾಗರ ರೇಖಾ ಪ್ರಸಾದ ಶೈಲಿಯಲ್ಲಿ ಗಳಗನಾಥ, ಪಾಪನಾಥ, ಕಾಶಿ ವಿಶ್ವೇಶ್ವರ, ಕಾಡಸಿದ್ದೇಶ್ವರ, ಜಂಬುಲಿಂಗ ದೇವಾಲಯಗಳಿರುತ್ತವೆ.

ಸುಮಾರು ೩-೪ನೆಯ ಶತಮಾನದವುಗಳೆಂದು ಹೇಳಲಾದ ಕೆಲವು ಇಟ್ಟಿಗೆಯ ಕಟ್ಟಡಗಳ ಭಗ್ನಾವಶೇಷಗಳು ಸಂಗಮೇಶ್ವರ ದೇವಾಲಯದ ಮುಂದೆ ಮತ್ತು ಜೈನ ದೈವಾಲಯದ ಹಿಂಬದಿಯಲ್ಲಿ ಕಂಡು ಬಂದಿವೆ. ಈ ದೇವಾಲಯಗಳನ್ನು ಕಟ್ಟುವ ಮೊದಲು

ಇಲ್ಲಿ ಇಟ್ಟಿಗೆಯ ಮಂದಿರಗಳಿದ್ದಿರಬೇಕು. ಮುಂದೆ ವಾಸ್ತುಶಿಲ್ಪದಲ್ಲಿ ಸುಧಾರಣೆಯಾದಂತೆ ಕಲ್ಲಿನ ಕಟ್ಟಡಗಳು ತಲೆ ಎತ್ತಿರಬಹುದು.

ಪಟ್ಟದಕಲ್ಲು ದೇವಾಲಯಗಳ ಗರ್ಭಗುಡಿಯ ಚೌಕಟ್ಟಿನ ಕೆಳಗೆ ಕಾಣವ ಗಂಗಾ ಯಮುನೆಯ ವಿಗ್ರಹಗಳು ಮತ್ತು ವಿರೂಪಾಕ್ಷ ದೇವಾಲಯದಲ್ಲಿಯ ನಂದಿ ಮಂಟಪವು ಉತ್ತರ ಭಾರತದಲ್ಲಿ ರಾಜ್ಯಭಾರ ಮಾಡುತ್ತಿದ್ದ ಗುಪ್ತರ ವಾಸ್ತು ಪದ್ಧತಿಯನ್ನು ಅನುಸರಿಸಿವೆ. ಇಲ್ಲಿಯ ರೇಖಾ ನಾಗರ ದೇವಾಲಯಗಳು ವಾಸ್ತು ಶಿಲ್ಪ ಬೆಳವಣಿಗೆಯ ವಿವಿಧ ಹಂತಗಳನ್ನು ಸೂಚಿಸುತ್ತವೆ. ಪಾಪನಾಥ ದೇವಾಲಯ ಕ್ರಿ.ಶ. ೬೭೦ರ ಅವಧಿಯಲ್ಲಿ ನಿರ್ಮಿತವಾಗಿದೆ. ಇತರ ವಾಸ್ತುಶಿಲ್ಪ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳ ವಾಸ್ತುಶಿಲ್ಪದಷ್ಟು ಮುಂದುವರಿದುದಲ್ಲ 'ಈ ಗುಡಿಯ ರಚನೆಯ ವೇಳೆಗೆ ವಾಸ್ತುಶಿಲ್ಪ ಕಲೆ ಹೆಚ್ಚು ಮುಂದುವರಿದಿದ್ದಲ್ಲ' ಎಂದು ಪರ್ಸಿಬ್ರೌನರು ತಮ್ಮ 'ಇಂಡಿಯನ್ ಆರ್ಕಿಟೆಕ್ಚರ್ ಗ್ರಂಥದಲ್ಲಿ ಹೇಳಿದ್ದಾರೆ.

ಎರಡನೇ ಹಂತದ ಬೆಳವಣಿಗೆಯು ಜಂಬುಲಿಂಗ ದೇವಸ್ಥಾನದಲ್ಲಿ ಕಂಡುಬರುತ್ತದೆ. ವಿಶ್ವನಾಥ ದೇವಾಲಯವು ಕ್ರಿ.ಶ. ೮ನೇ ಶತಮಾನದ ಮಧ್ಯಭಾಗದಲ್ಲಿ ನಿರ್ಮಿತವಾದ ಪಟ್ಟದಕಲ್ಲಿನ ಕೊನೆಯ ದೇವಾಲಯ. ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪದ ಬೇರುಗಳನ್ನು ಇಲ್ಲಿ ಗುರುತಿಸಬಹುದು. ರೇಖಾನಾಗರ ಶೈಲಿ ಹಾಗೂ ದ್ರಾವಿಡ ಶೈಲಿಯ ವಾಸ್ತುಶಿಲ್ಪಗಳು ಒಂದರ ಮೇಲೊಂದು ಪ್ರಭಾವ ಬೀರುತ್ತ ಬೆಳೆದುಬಂದಿರುವುದು ಕಂಡು ಬರುತ್ತದೆ. ಇದರ ಪರಿಣಾಮವಾಗಿಯೇ ಸುಪ್ರಸಿದ್ಧ ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪ ರೂಪುಗೊಂಡಿದೆಯೆಂದು ಹೇಳಬಹುದು.

ಪಾಪನಾಥ ದೇವಾಲಯ ವಿಷ್ಣುಮಂದಿರವಾಗಿದೆ, ಈ ದೇಗುಲದಲ್ಲಿ ಅಚ್ಚುಕಟ್ಟಾದ, ಸಾಂಗೋಪಾಂಗ ಶಿಲ್ಪಕೃತಿಯನ್ನು ಸಿದ್ಧಪಡಿಸುವ ಪ್ರಥಮ ಪ್ರಯತ್ನವನ್ನು ಕಾಣಬಹುದು. ಆದರೆ ಈ ಪ್ರಯತ್ನ ಕೆಲವು ವಿಸಂಗತಗಳ ಕಾರಣದಿಂದ ಸಫಲವಾಗಿಲ್ಲ. ಆ ವಿಸಂಗತಿಗಳು ಹೀಗಿವೆಃ ಇದರ ಎತ್ತರ ವಿಸ್ತೀರ್ಣಕ್ಕೆ ಸಾಲದು, ಸುಖನಾಸಿ ಹವಣರಿಯದೆ ದೊಡ್ಡದಾಗಿದೆ, ಅಲಂಕಾರದಲ್ಲಿ ನಯ ಮತ್ತು ಔಚಿತ್ಯ ಕಡಿಮೆ. ಇಂಥ ಕೊರತೆಗಳಿಗೆ ವಿರುಪಾಕ್ಷ ದೇವಾಲಯವು ಪರಿಹಾರ ಒದಗಿಸುತ್ತದೆ. ಇದೊಂದು ಸ್ವತಂತ್ರವಾದ ಸುಂದರವಾದ, ಸಾಲಂಕೃತವಾದ ಸಂಪೂರ್ಣ ಕಲಾಕೃತಿ.

ವಾಸ್ತುಶೈಲಿಯ ಎಲ್ಲ ಪ್ರಮುಖ ಅಂಶಗಳನ್ನು ಅಳವಡಿಸಿಕೊಂಡ ವಿರೂಪಾಕ್ಷ ದೇವಾಲಯ ದ್ರಾವಿಡ ಶೈಲ್ಲಿಯಲ್ಲಿ ವಿಕಾಸ ಹೊಂದಿದೆ. ಇದರ ರಚನೆಯ ಕಾಲ ಕ್ರಿ.ಶ.೭೪೦. ಕಾಂಚಿಯ ರಾಜ ಸಿಂಹೇಶ್ವರನ ಗುಡಿಯ ಮಾದರಿಯಲ್ಲಿ ಈ ದೇವಾಲಯವನ್ನು ಕಟ್ಟದ್ದಾರೆ. ಇದನ್ನೇ ಅನುಸರಿಸಿ ರಾಷ್ಟ್ರಕೂಟನ ಒಂದನೆಯ ಕೃಷ್ಣನು ಕೈಲಾಸ ದೇವಾಲಯವನ್ನು ಎಲ್ಲೋರಾದಲ್ಲಿ ಕಟ್ಟಿಸಿದನು. ಈ ಗುಡಿಯ ಮೂರ್ತಿಗಳನ್ನು ಹಲವಾರು ಶಿಲ್ಪಜ್ಞರು ತಯಾರಿಸಿದ್ದರೂ ಅವು ಒಂದಕ್ಕೊಂದು ಸುಸಂಬದ್ಧವಾಗಿ

ರಚಿತವಾಗಿದ್ದು ಕಣ್ಣಿಗೆ ರಂಜನಿಯವಾಗಿವೆ. ಮೂರ್ತಿ ಶಿಲ್ಪವು ವಾಸ್ತು ಶಿಲ್ಪಕ್ಕೆ ಪೂರಕ, ಪೋಷಕವಾಗಿದೆ. ಈ ಗುಡಿಯಲ್ಲಿ ಇವೆರಡೂ ಕಲೆಗಳು ಹಾಸು ಹೊಕ್ಕಾಗಿವೆ. ಅವು ಎಲ್ಲಿ ಪ್ರಾರಂಭವಾದವು, ಎಲ್ಲಿ ಮುಗಿಯುವುದು ಎಂದು ವಿಂಗಡಿಸಲು ಬಾರದಷ್ಟು ಸಾಮರಸ್ಯದ ಸರಣಿಯಲ್ಲಿ ಬಂಧಿತವಾಗಿವೆ ಎಂದು ಪರ್ಸಿಬ್ರೌನ್ ಹೇಳಿದ್ದು ಔಚಿತ್ಯ ಪೂರ್ಣವಾಗಿದೆ. ಇಲ್ಲಿಯ ಮೂರ್ತಿಗಳು ಜೀವ ಕಳೆ ತುಂಬಿಕೊಂಡು ತಮ್ಮ ನಿರ್ಮಾಣದ ಉದ್ದೇಶವನ್ನು ಈಗಲೂ ಸಫಲಗೊಳಿಸುತ್ತಿವೆ. ದೇವ ಕೋಷ್ಠಗಳಲ್ಲಿರುವ ಚಿತ್ತಾಕರ್ಷಕ ಶೈವ ಮತ್ತು ವೈಷ್ಣವ ಶಿಲ್ಪ, ಧಾರ್ಮಿಕ, ಪೌರಾಣಿಕ ಮತ್ತು ಸಾಮಾಜಿಕ ಜೀವನ ಚಿತ್ರಗಳ ಅತ್ಯುತ್ತಮ ಶಿಲ್ಪಗಳನ್ನು ಹೊಂದಿರುವ ಈ ದೇವಾಲಯ ನಿಜಕ್ಕೂ ಒಂದು ಅಪೂರ್ವ ವಾಸ್ತು ಸಂಗ್ರಹಾಲಯ. ಪ್ರಣಯಾಸಕ್ತ ಜೋಡಿಗಳು, ಒಳಾಂಗಣದ ಕಂಬದ ಮೇಲಿನ ರಾಮಾಯಣ, ಮಹಾಭಾರತ, ಭಾಗವತ, ಪಂಚತಂತ್ರ, ಕಿರಾತಾರ್ಜುನೀಯ ಮುಂತಾದ ಕಥಾಸಾರ ಹೇಳುವ ಫಲಕ ಶಿಲ್ಪಗಳು ಚಾಲುಕ್ಯ ಶಿಲ್ಪಗಳ ಪರಿಣತಿಯನ್ನು ಸಾರುತ್ತವೆ. ಇವುಗಳನ್ನು ಅಭ್ಯಸಿಸಿದರೆ ನಮ್ಮ ಪೂರ್ವಜರ ಉಡಿಗೆ, ತೊಡಿಗೆಗಳು, ಗೃಹಜೀವನ, ಧಾರ್ಮಿಕ ಆಚಾರ-ವಿಚಾರಗಳು, ಕಲೆಯ ಮಟ್ಟ, ಕಲಾಭಿರುಚಿ, ಸಂಪತ್ತು ಇವುಗಳ ಕಲ್ಪನೆ ಬರುವುದು.

ಹಿಂದೂ ಧರ್ಮದ ಪ್ರಮುಖ ಪಂಥಗಳಾದ ಶೈವ ಮತ್ತು ವೈಷ್ಣವ ಪಂಥಗಳ, ಮಧುರ ಸರಸ ಸಮ್ಮಿಲನವನ್ನು ಪಟ್ಟದಕಲ್ಲಿನ ಗುಡಿಗಳ ವಾಸ್ತು ಶಿಲ್ಪ, ಮೂರ್ತಿ ಶಿಲ್ಪ ಕಲೆಗಳಲ್ಲಿ ಕಾಣಬಹುದು. ಪ್ರಪಂಚಕ್ಕೆ ಪರಿಚಿತರಿರುವ ರಾಮ-ರಾವಣ, ಧರ್ಮರಾಜ-ದುರ್ಯೋಧನ, ಕೃಷ್ಣ-ಕೇಶಿ ಮೊದಲಾದವರ ಮತ್ತು ಅವರಲ್ಲಿದ್ದ ಸಾತ್ವಿಕ-ತಾಮಸ ಶಕ್ತಿಗಳ ಕಲ್ಪನೆಗಳನ್ನು ಶಿಲ್ಪಿಗಳು ಈ ಗುಡಿಗಳಲ್ಲಿ ಸಾಕಾರಗೊಳಿಸಿದ್ದಾರೆ. ಧಾರ್ಮಿಕ ಪಂಥಗಳ ಸಂಗಮದೊಂದಿಗೆ, ಆಗಿನ ಕಾಲದ ಕನ್ನಡಿಗರ ಜನ ಜೀವನವನ್ನು ಅರಿತುಕೊಳ್ಳಲೂ ಇಲ್ಲಿಯ ಮೂರ್ತಿಗಳು ಸಹಾಯ ಮಾಡುತ್ತವೆ. ಸಾಹಿತ್ಯವು ಶಬ್ಧರೂಪದಿಂದ ಸಮಕಾಲೀನ ಜನಜೀವನವನ್ನು ಪ್ರತಿಬಿಂಬಿಸುವಂತೆ ಪಟ್ಟದಕಲ್ಲು ಗುಡಿಯ ದೇವ ದೇವತೆಗಳ, ರಾಕ್ಷಸರ, ಗಂಧರ್ವ ಕಿನ್ನರರ, ಗಣಗಳ ರಸಿಕ ದಂಪತಿಗಳ ಪ್ರತಿಮೆಗಳನ್ನು ಶಾಶ್ವತಗೊಳಿಸುವ ಮೂಲಕ ಶಿಲ್ಪವೂ ಜನಜೀವನದ ಪ್ರತಿಬಿಂಬವೆಂದು ಸಾಬೀತು ಪಡಿಸುತ್ತಿವೆ. ಆಗಿನ ಕಾಲದ ವೇಷಭೂಷಣಗಳು, ಆಚಾರವಿಚಾರಗಳನ್ನು ನಾವು ಈ ಶಿಲ್ಪಗಳ ಸಹಾಯದಿಂದ ತಿಳಿದುಕೊಳ್ಳಬಹುದು. ಇಲ್ಲಿಯ ಮೂರ್ತಿಗಳು ಜೀವಕಳೆ ತುಂಬಿಕೊಂಡು ಚಿತ್ತಾಕರ್ಷಕವಾಗಿವೆ. ಆಯಾ ಪಾತ್ರಕ್ಕೆ ತಕ್ಕಂತೆ ಪ್ರಶಾಂತತೆ, ರೊಚ್ಚು, ಕೆಚ್ಚು, ರಭಸ, ರೌದ್ರ-ಶೋಕ, ಪ್ರಣಯ ಮುಂತಾದ ಭಾವನೆಗಳು ಅವುಗಳಲ್ಲಿ ಹೊರಹೊಮ್ಮಿವೆ.

ಮೂರ್ತಿಗಳ ಉಡುಪು ತೊಡುಪುಗಳು ಚೆನ್ನಾಗಿ ಅಲಂಕೃತವಾಗಿವೆ. ಮುಂದೆ ೧೨-೧೩ನೇಯ ಶತಮಾನಗಳಲ್ಲಿ ನಿರ್ಮಿತವಾದ ಮೂರ್ತಿಗಳಲ್ಲಿ ಕಂಡುಬರುವ ಅಲಂಕಾರದ ಅತಿರೇಕ ಇವುಗಳಲ್ಲಿ ಇಲ್ಲ. ಇಲ್ಲಿಯ ಅಲಂಕಾರ ಕಲೆಯಲ್ಲಿ ಉಚಿತ

ಮಿತಿಯಿದೆ. ಐಹೊಳೆ, ಬಾದಾಮಿ, ಮಹಾಕೂಟಗಳಲ್ಲಿ ಹರಿದ ಕಲಾಪ್ರವಾಹ ಮುಂದುವರಿದು ಪಟ್ಟದಕಲ್ಲಿನಲ್ಲಿ ನಾನಾ ಮೂರ್ತಿಗಳ ಮುಖಾಂತರ ವಿವಿಧ ರೂಪಗಳಲ್ಲಿ ಸ್ಫುಟಗೊಂಡಿದೆ. ಇಲ್ಲಿಯ ಯಾವ ಮೂರ್ತಿಯನ್ನು ನೋಡಿದರೂ ಅದರ ಮೇಲೆ ಬಾದಾಮಿ ಚಾಲುಕ್ಯರ ಮೂರ್ತಿ ಶಿಲ್ಪಕಲೆಯ ಮೇಲ್ಮೆ ಚೆನ್ನಾಗಿ ಮುದ್ರಿತವಾದದುದನ್ನು ಕಾಣಬಹುದು, ಅವು ಅಷ್ಟು ರಸಭರಿತವಾಗಿ ಕಲಾಪೂರ್ಣವಾಗಿವೆ.

ಪಟ್ಟದಕಲ್ಲಿನ ಗುಡಿಗಳ ಉಸುಕು ಕಲ್ಲು, ಉಳಿಯ ಹೊಡೆತಕ್ಕೆ ಒಲಿದು ಶಿಲ್ಪಿ ಬಯಸಿದಂತೆ ಮಣಿದಿದೆ. ನಯ ನಾಜೂಕಿನ ಸಂಸ್ಕಾರ ಪಡೆದಿದೆ. ಉಳಿಯ ಏಟು ಎಷ್ಟು ಬೇಕೋ ಅಷ್ಟೇ ಬಿದ್ದು ಮೂರ್ತಿಗಳು ಪ್ರಮಾಣ ಬದ್ಧವಾಗಿದ್ದು, ಅಂಗಾಂಗ, ಅವಯವಗಳು, ಮನೋಭಾವಗಳು ಸ್ಫುಟಗೊಂಡಿವೆ. ಪಟ್ಟದಕಲ್ಲಿನಲ್ಲಿ ಕೆಲಸ ಮಾಡಿದ ಸ್ಥಪತಿಗಳು, ರೂವಾರಿಗಳೆಂದು ಅಲ್ಲಿಯ ಅವಶೇಷಗಳು ಇಂದೂ' ಸಾರಿ ಹೇಳುತ್ತಿವೆ.

ರಾಜ್ಯ ಅಲ್ಪಜೀವಿ, ಕಲೆ ಚಿರಂಜೀವಿ

ಕನ್ನಡಗರಿಗೆ ರನ್ನಗನ್ನಡಿಯಂತಿರುವ ಹಂಪಿಯ ಶಾಸನವು ನಮ್ಮ ಉದಾತ್ತ ಸಂಸ್ಕೃತಿಯು ಬೀಜಮಾತುಗಳನ್ನು ಬಿತ್ತರಿಸುತ್ತದೆ-

''ಕೆರೆಯಂ ಕಟ್ಟಿಸು ಬಾವಿಯಂ ಸವಸು ದೇವಾಗಾರಮಂ ಮಾಡಿಸ-

ಜ್ಜೆರೆಯಾಳ್ಸಿಲ್ಕಿದನಾಥರಂ ಬಿಡಿಸು......''

ಮಾನವಾನಾಗಿ ಹುಟ್ಟಿದ ಮೇಲೆ ಅವನ ಕರ್ತವ್ಯಗಳೇನು ಎಂಬುದನ್ನು ಸ್ಫಟಿಕದಷ್ಟೇ ಸ್ಪಷ್ಟವಾಗಿ ಇಲ್ಲಿ ಹೇಳಲಾಗಿದೆ. ಮಾನವನು ತನ್ನ ಜೀವನನ್ನು ಸಾರ್ಥಕಗೊಳಿಸಲು ಕೆರೆಯನ್ನು ಕಟ್ಟಿಸಬೇಕು; ಬಾವಿ ತೆಗೆಸಬೇಕು, ದೇವಾಲಯಗಳನ್ನು ನಿರ್ಮಿಸಬೇಕು. ದೇವಾಲಯಗಳ ರೂಪದಲ್ಲಿ ಧರ್ಮವನ್ನು ನಿಲ್ಲಿಸುವ ಪರಂಪರೆಯನ್ನು ಚಾಲುಕ್ಯರ ಇತಿಹಾಸದುದ್ದಕ್ಕೂ ನಾವು ಕಾಣುತ್ತೇವೆ.

ಚಾಲುಕ್ಯರ ಕಾಲದಲ್ಲಿ ಅಖಂಡವಾಗಿ ೩೦೦ ವರ್ಷಗಳ ವರೆಗೆ (ಕ್ರಿ.ಶ. ೪೫೦-೭೫೦) ಐಹೊಳೆ, ಬಾದಾಮಿ, ಮಹಾಕೂಟ, ಪಟ್ಟದಕಲ್ಲು ಮತ್ತು ಅವುಗಳ ಸಮೀಪದ ಊರುಗಳಲ್ಲಿ ನೂರಾರು ದೇವಾಲಯಗಳು ಮತ್ತು ೬-೭ ಕಲ್ಲಿನಲ್ಲಿ ನಿರ್ಮಿಸಿದ ಗುಹೆಗಳು ಸಿದ್ಧವಾಗಿವೆ. ಹೀಗಾಗಬೇಕಿದ್ದರೆ ಚಾಲುಕ್ಯ ರಾಜರಿಂದ ಮತ್ತು ಉದಾರ ಮನಸ್ಸಿನ ಧನಿಕರ ಸಹಾಯವನ್ನು ಹೊಂದಿದ ಶಿಲ್ಪಿಗಳ ಸಂಘವೇ ಈ ಪ್ರದೇಶದಲ್ಲಿಕೆಲಸ ಮಾಡುತ್ತಿತ್ತೆಂದು ನಿರ್ವಿವಾದವಾಗಿ ಹೇಳಬಹುದು.

ಚಾಲುಕ್ಯ ವಾಸ್ತು ಶಿಲ್ಪ ಕಲೆಯು ಕೆಲವು ಅಸಧಾರಣ ಸನ್ನೀವೇಶಗಳಿಂದ ಸಂಸ್ಮರಣೀಯವಾಗಿವೆ. ಒಂದನೆಯದಾಗಿ, ಚಿರಸ್ಥಾಯಿತ್ವ. ಈ ಕಲೆಯ ಎರಡು ಮುಖಗಳಾಗಿದ್ದ ಗುಹಾಶಿಲ್ಪ ಮತ್ತು ಮಂದಿರ ಶಿಲ್ಪ ಇವು ಹೆಚ್ಚು ಸ್ಥಾಯಿ ವಸ್ತುಗಳಿಂದ ನಿರ್ಮಿಸಲಾಗಿರುವದರಿಂದ ಅವು ಸುದೀರ್ಘಕಾಲದವರೆಗೆ ಬಾಳುವಂತಹವಾಗಿವೆ. ಎರಡನೆಯದು, ಸುಭಗತೆ. ಈ ಕಲಾಲೋಕವನ್ನು ಅವಲೋಕಿಸಿದರೆ ಚಾಲುಕ್ಯ ಶಿಲ್ಪಿಗಳು ಸಿದ್ಧಹಸ್ತರಾಗಿದ್ದರೆಂಬ ವಿಷಯ ಪ್ರತೀತಿಗೆ ಬರುತ್ತದೆ. ಕೆಲವು ವಿಷಯಗಳಲ್ಲಿ ಪ್ರಯೋಗಗಳನ್ನು ನಡೆಸುತ್ತಿರುವಾಗಲೂ ಇನ್ನೂ ಕೆಲವು ವಿಷಯಗಳಲ್ಲಿ ಅವರು ತಮ್ಮದೆ ಆದ ಪ್ರಾವೀಣ್ಯವನ್ನು ಪ್ರದರ್ಶಿಸಿರುವರು. ಮೂರನೆಯದು, ಚಿತ್ರಣ ಕೌಶಲ. ಹೂ-ಬಳ್ಳಿಯಂತಹ ಸಾಮಾನ್ಯ ಆಕೃತಿಗಳೆ ಆಗಲಿ, ಜೀವಿಗಳ ಪ್ರಪಂಚವೆ ಆಗಲಿ, ಅವನ್ನು ಯಥಾವತ್ತಾಗಿ, ನಯವಾಗಿ ಚಿತ್ರಿಸಿದ್ದಾರೆ ಈ ಶಿಲ್ಪಿಗಳು. ನಾಲ್ಕನೆಯದು, ಪ್ರತಿಮಾಪ್ರಾಧಾನ್ಯ. ಭಿತ್ತಿ, ದ್ವಾರಸ್ಥಾನ, ಕಂಬ, ಮುಂತಾಗಿ ಎಲ್ಲೆಡೆಗಳಲ್ಲಿ ವಿಪುಲವಾಗಿ ಆಕೃತಿಗಳನ್ನು ವಿಗ್ರಹಗಳನ್ನು, ಮೂರ್ತಿಗಳನ್ನು ಕೊರೆದು ಇಲ್ಲವೆ ಕಟೆದು ಗವಿಗಳನ್ನೂ, ಗುಡಿಗಳನ್ನೂ, ಚಿತ್ರಾಲಯಗಳಂತೆ ಶೋಭೆಗೊಳಿಸಿದ ಚಾಲುಕ್ಯ ಶಿಲ್ಪಿಗಳ ಚಾತುರ್ಯ

ಶ್ಲಾಘನೀಯವಾಗಿದೆ. ಐದನೆಯದು, ಸಚೇತನತ್ವ. ನಿರ್ಜೀವವಾದ ಜಡಶಿಲಾ ಪಾಷಾಣನಲ್ಲಿ ಮೂಡಿಸಿದ ಸುರ-ನರ-ತಿರ್ಯಕ್ ಪ್ರಾಣಿಗಳ ಆಕೃತಿಗಳಲ್ಲಿ ಜೀವಕಳೆಯನ್ನು ತುಂಬಿ, ಅವನ್ನು ಸಜೀವವಾಗಿ, ಸಚೇತನವಾಗಿ, ಉಸಿರಾಡುವಂತೆ ಮಾಡಿದ ಈ ಕಲಾಬ್ರಹ್ಮರ ಸಾಮರ್ಥ್ಯ, ಅನ್ಯಾದೃಶವಾದುದು. ಈ ಎಲ್ಲ ವಿಗ್ರಹಗಳು ಕೇವಲ ಅಲಂಕಾರದ ಬಾಹ್ಯವಸ್ತುಗಳಾಗಿರದೆ, ಆ ಶಿಲ್ಪಕೃತಿಗಳ ಸಹಜ, ಆತ್ಮೀಯ ಅಂಗೋಪಾಂಗವಾಗಿ ಒಪ್ಪುತ್ತವೆ.

ಬಾದಾಮಿಯ ಚಾಲುಕ್ಯರು ಸಾಮ್ರಾಜ್ಯವನ್ನು ಕಟ್ಟದರು. ಆ ಸಾಮ್ರಾಜ್ಯ ಭಾರತದ ರಾಜಕೀಯದಲ್ಲಿ ಪ್ರತಿಸಿದ್ಧಿಯನ್ನು ಪಡೆದು ಸುಮಾರು ಎರಡು ಶತಮಾನ ಬಾಳಿ ಅಸ್ತಂಗತವಾಯಿತು. ಬಾದಾಮಿಯ ಚಾಲುಕ್ಯರು ನಿಷ್ಠಾವಂತ ಕಲಾಪ್ರೇಮಿಗಳಾಗಿದ್ದರು. ಅವರ ಉದಾರ ಸಹಾಯ ಮತ್ತು ಪ್ರೋತ್ಸಾಹದಿಂದಾಗಿ ಅವರನ್ನು ಆಶ್ರಯಿಸಿದ ಶಿಲ್ಪಕಲಾಚಕ್ರವರ್ತಿಗಳು ನೂತನ ಕಲಾಸಾಮ್ರಾಜ್ಯವನ್ನು ಸ್ಥಾಪಿಸಿದರು. ಈ ಸಾಮ್ರಾಜ್ಯ ಹದಿಮೂರು ಶತಮಾನಗಳು ಉರುಳಿದರೂ ಇನ್ನೂ ಪ್ರಭಾವಶಾಲಿಯಾಗಿ ಬಾಳಿದೆ. ಈ ಮೂಂದೂ ಹಲವು ಶತಮಾನ ಬಾಳುವಂಥ ಕೆಚ್ಚು ಅದರಲ್ಲಿದೆ. ರಾಜ್ಯ ಅಲ್ಪಜೀವಿ, ಕಲೆ ಚಿರಂಜೀವಿ; ಅನ್ನುವದಕ್ಕೆ ಇದೊಂದು ನಿದರ್ಶನ.

ಭಾರತೀಯ ಶಿಲ್ಪವಿಶ್ವದಲ್ಲಿ ಚಾಲುಕ್ಯ ವಾಸ್ತುಶಿಲ್ಪಕಲೆಗೆ ವಿಶಿಷ್ಟಸ್ಥಾನವಿದೆ. ಈ ಶಿಲ್ಪ ಪ್ರಪಂಚದ ಪರಿಚಯವಿಲ್ಲದೆ ಮಾಡಿದ ಭಾರತೀಯ ಶಿಲ್ಪಕಲಾವ್ಯಾಸಂಗವು ಪರಿಪೂರ್ಣವಾಗಲಾರದು. ದಕ್ಷಿಣ ಭಾರತದ ಶಿಲ್ಪರಂಗದಲ್ಲಿ ಇದರ ಪಾತ್ರವು ಮೌಲಿಕವಾಗಿದೆ. ಆರಂಭಿಕಾಲದ ಔತ್ತರೇಯ ಮತ್ತು ದಾಕ್ಷಿಣಾತ್ಯ ಶಿಲ್ಪಮಾರ್ಗಗಳ ಪ್ರತ್ಯೇಕತೆಯನ್ನೂ, ಸಾಮ್ಯವನ್ನೂ ಸಮನ್ವಯವನ್ನೂ ಕಂಡು ಹಿಡಿಯಲು ಇದರಷ್ಟು ಉತ್ತಮ ಸಾಧನ ಬೇರೊಂದಿಲ್ಲ. ಈ ದಕ್ಷಿಣೋತ್ತರ ಮಾರ್ಗಗಳ ಸಮನ್ವಯದ ಪರಿಪಕ್ವಫಲ ಆನಂತರ ಹೆಸರು ಪಡೆದ ಚಾಲುಕ್ಯ ಶಿಲ್ಪಶೈಲಿಗಳಲ್ಲಿ ಗೋಚರವಾಯಿತು.

ಐಹೊಳೆ, ಬಾದಾಮಿ, ಮಹಾಕೂಟ, ಪಟ್ಟದಕಲ್ಲು, ಈ ನಾಲ್ಕು ಸ್ಥಳಗಳಲ್ಲಿ ಬಾದಾಮಿ ಚಾಲುಕ್ಯರ ಶಿಲ್ಪಕೃತಿಗಳು ಅಭಿವ್ಯಕ್ತವಾಗಿವೆ. ಇವೆಲ್ಲ ಆ ರಾಜರ ರಾಜಧಾನಿ ಮತ್ತು ನೆರೆಯ ಗ್ರಾಮಗಳಾಗಿವೆ. ಇಂಥ ಶಿಲ್ಪಕೃತಿಗಳು ಬೇರೆ ಕಡೆಗೆ ದೊರೆತಿಲ್ಲ. ಅಂದಿನ ರಾಜಕೀಯ ಸನ್ನೀವೇಶಗಳ ಕಾರಣದಿಂದ ಪ್ರಭುಶಕ್ತಿಯೊಂದಿಗೆ ಜನಾಂಗದ ಕಲಾಸತ್ವವಾದರೂ ಒಂದೆಡೆಯಲ್ಲಿ ಕೇಂದ್ರೀಕೃತವಾಗಿದ್ದರೆ ಅದು ಆಚ್ಚರಿಯಲ್ಲ. ಈ ಕೆಲವೇ ಸ್ಥಗಳಲ್ಲಿಯಾದರೂ ರೂಪುವೆತ್ತ ಕಲಾಸೃಷ್ಟಿ ತಾನೆ ತಾನಾಗಿ ಸಾಕಷ್ಟು ಘನವಾಗಿದೆ, ವಿಸ್ತೀರ್ಣವಾಗಿದೆ. ಇಷ್ಟೊಂದು ಸೃಷ್ಟಿಯ ನಿರ್ಮಾಣ ಕಾರ್ಯದಲ್ಲಿ ಆ ರಾಜಮಹಾರಾಜರ ದ್ರವ್ಯ, ಕಾಲ ಮತ್ತು ರಚನಾ-ಸಾಮರ್ಥ್ಯವು ತುಂಬಾ ವ್ಯಯವಾಗಿ; 'ಬದುಕು ಕಿರಿದು-ಕಲೆ ಹಿರಿದು' ಎಂಬ ಮಾತಿನ ಅನುಭವ ಬಂದಿರಲಿಕ್ಕೆ ಸಾಕು.

ಕೊನೆಯ ಮಾತುಃ

ಚಾಲುಕ್ಯರ ವಾಸ್ತುಶಿಲ್ಪ ವೈಭವ ಸಾರಿ ಹೇಳುವ ಈ ದೇಗುಲಗಳು ನಮ್ಮ ಸಂಸ್ಕೃತಿಯ ಕೇಂದ್ರಗಳಾಗಿದ್ದವು, ನಮ್ಮ ಸಂಗೀತ, ನೃತ್ಯ, ಕಲೆ, ನಾಟಕ, ಪುರಾಣ, ಹರಕಥೆ ಎಲ್ಲವುಗಳಿಗೂ ಈ ದೇವಾಲಯಗಳೇ ಕಾರ್ಯಕ್ಷೇತ್ರ. ನಮ್ಮ ಇತಿಹಾಸ, ಪರಂಪರೆ, ಸಂಸ್ಕೃತಿಗಳ ಉತ್ತುಂಗ ಪರಿಚಯ ಮಾಡುವ, ಶಿಲ್ಪಕಲಾವೈಭವ ಹೇಳುತ್ತ, ಸಂಗೀತ ಹಾಡುತ್ತಿದ್ದ, ನೃತ್ಯದಿಂದ ಸ್ಪಂದಿಸುತ್ತಿದ್ದ ಚಾಲುಕ್ಯರ ಎಷ್ಟೋ ದೇವಾಲಯಗಳು ಇಂದು ಹಾಳುಬಿದ್ದಿವೆ.

ಕೆಲವು ಭೂಗತವಾಗಿವೆ. ಇನ್ನೂ ಕೆಲವು ನುಚ್ಚುನೂರಾಗಿವೆ. ಗತವೈಭವವನ್ನು ಎದೆತಟ್ಟಿ ಹೇಳುವಲ್ಲಿ ನಾವು ಭಾರೀ ನಿಸ್ಸೀಮರು. ಆದರೆ, ಆದರ ಬಗ್ಗೆ ನಮಗೆ ಗೌರವ ತೀರಾ ಕಡಿಮೆ ಎಂಬುದು ವಾಸ್ತವ. ಬಾಯಿ ಮಾತುಗಳಲ್ಲಿ ಮಾತ್ರ ಬಡಾಯಿ. ನಮ್ಮ ಸಾಂಸ್ಕೃತಿಕ ಸಂಪತ್ತನ್ನು ಉಳಿಸಿಕೊಳ್ಳುವ ಯೋಗ್ಯತೆ ಕೂಡ ನಮಗಿಲ್ಲ. ಕೋಟಿಗಟ್ಟಲೆ ಖರ್ಚುಮಾಡಿದರೂ ಇಂಥ ದೇವಾಲಯಗಳನ್ನು ನಿರ್ಮಿಸುವ ಯೋಗ್ಯತೆ ಅಧುನಿಕರು, ನಾಗರಿಕರು ಎನಿಸಿಕೊಂಡಿರುವ ಈಗಿನವರಿಗಿಲ್ಲ ಎಂಬುದು ಅಪ್ರಿಯ ಸತ್ಯ. ಇದ್ದ ಸಾಂಸ್ಕೃತಿಕ ಸಂಪತ್ತನು ರಕ್ಷಿಸಿ, ಪ್ರಾಚೀನ ಶಿಲ್ಪಕಲಾ ಸಂಪತ್ತಿನ ಖಣಿಯಾಗಿರುವ ಚಾಲಾಕ್ಯರ ದೇವಾಲಯಗಳನ್ನು ಅಭಿವೃದ್ಧಿ ಪಡಿಸಿಕೊಂಡರೆ ಅದುವೆ ಊರನ್ನು ಬೆಳೆಸುತ್ತದೆ; ಉಳಿಸುತ್ತದೆ. ಶ್ರೀಮಂತಗೋಳಿಸುತ್ತದೆ. ಆ ಪ್ರಜ್ಞೆ ನಮ್ಮಲ್ಲಿಂದು ಜಾಗ್ರತಗೊಳ್ಳಬೇಕು. ಪ್ರಜ್ವಲಿಸಬೇಕು. ಅದು ಇಂದಿನ ಅವಶ್ಯಕತೆಯೂ ಹೌದು.

ಕಲೆಯ ದೃಷ್ಟಿಯಿಂದ ಅಂತರ ರಾಷ್ಟ್ರೀಯ ಗಮನ ಸೆಳೆದಿರುವ ಐಹೊಳೆ, ಬಾದಾಮಿ, ಮಹಾಕೂಟ, ಪಟ್ಟದಕಲ್ಲುಗಳಲ್ಲಿಯ ಸಾಂಸ್ಕೃತಿಕ ಸ್ಮಾರಕಗಳಿಗೆ ಮಹತ್ವ ಬರದೇ ಇರುವುದಕ್ಕೆ ಸರಕಾರ ಮತ್ತು ಸಾರ್ವಜನಿಕರು ಕಾರಣ. ಕೆಂಪು ಪಟ್ಟಿಗಳಲ್ಲಿ ಹೆಪ್ಪುಗಟ್ಟಿದ ನಿರ್ಲಕ್ಷತನದ ನರ್ತನ, ಸ್ಥಳೀಯರ ಅನಾದರದೊಂದಿಗೆ ಹಾಸುಹೊಕ್ಕಾಗಿ ಹೆಣೆದುಕೊಂಡಿರುವುದರಿಂದ, ಒಂದಕ್ಕೊಂದು, ಪೂರಕ, ಪೋಷಕ, ಪರಿಪೂರಕವಾಗಿ ಕಾರ್ಯನಿರ್ವಹಿಸಿ ಚಾಲುಕ್ಯ ವಾಸ್ತುಶಿಲ್ಪದ ಕೇಂದ್ರಗಳು ಇದ್ದೂ ಇಲ್ಲದಂತೆ ಉಳಿದಿವೆ. ಅವು ಬೆಳಕಿಗೆ ಬರಲು ಪ್ರವಾಸಿಕರಿಗೆ ಅವಶ್ಯಕವಾದ ಉತ್ತಮ ವಸತಿಗೃಹ, ಭೋಜನಾಲಯ, ವಾಹನ ಮುಂತಾದ ಜೀವನದ ಸೌಲಭ್ಯಗಳು ಐಹೊಳೆ, ಪಟ್ಟದಕಲ್ಲು, ಮಹಾಕೂಟಗಳಲ್ಲಿ ಲಭ್ಯವಾಗಬೇಕು. ಒಳ್ಳೆಯ ದಾರಿಯ ಅಭಾವದಿಂದ, ಆನಂದದಾಯಿಯಾದ ಈ ಕಲಾಸೌಂದರ್ಯವು ಅನೇಕ ರಸಿಕರ ಹಾಗೂ ಅಭ್ಯಾಸಿಗಳ ಕಣ್ಣಿಗೆ ಬೀಳದೆ ಉಂಪಾಗುತ್ತಿವೆ.

ಐಹೊಳೆ, ಬಾದಾಮಿ, ಮಹಾಕೂಟ, ಪಟ್ಟದಕಲ್ಲುಗಳ ಕಲಾವಶೇಷಗಳ ಬಗೆಗೆ ಪರಿಚಯಾತ್ಮಕವಾದ ಸುಲಭ ಬೆಲೆಯ ಒಳ್ಳೆಯ ಗ್ರಂಥಗಳು ಇದುವರೆಗೂ ಹೊರಟಿಲ್ಲ.

ಹೀಗಾಗಿ ಇಲ್ಲಿಯ ವಾಸ್ತುಶಿಲ್ಪ ವೈಭವ ಪ್ರಸಿದ್ಧಿ ಪಡೆಯದೇ, ಬಹುಜನರು ನೋಡದೇ ಅಜ್ಞಾತಸ್ಥಿತಿಯಲ್ಲಿಯೇ ಉಳಿದಿವೆ. ಯಾವ ನಾಡಿಗಾದರೂ ಹೆಮ್ಮೆ ತರಬಲ್ಲ ಕಲೆಯ ಚೆಲುವನ್ನು ಒಡಲಲ್ಲಿ ಹುದುಗಿಸಿಕೊಂಡ ಈ ತಾಣಗಳಲ್ಲಿ ರಾಷ್ಟ್ರಮಟ್ಟದ ಉತ್ಸವ ನಡೆಯುತ್ತಿರುವುದು ಸೂಕ್ತವಾಗಿದೆ. ಹಾಗೆ ತ್ವರಿತಗತಿಯಲ್ಲಿ ಸರಕಾರ ಈ ತಾಣಗಳಲ್ಲಿ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಮುಂದಾಗಬೇಕು. ಸ್ಥಳೀಯರು ಈ ನಿಟ್ಟಿನಲ್ಲಿ ಸರಕಾರದ ಮೇಲೆ ಒತ್ತಡ ತರಬೇಕು. ಒಟ್ಟಿನ ಮೇಲೆ ಸಮಸ್ಯೆಗಳ ಪರಿಹಾರವಾಗಬೇಕು. ಇದರಿಂದ ಮೂಲೆಗುಂಪಾಗಿರುವ ಈ ಸುಂದರ ಸಾಂಸ್ಕೃತಿಕ ಕೇಂದ್ರಗಳು ರಾಷ್ಟ್ರದ ನಕ್ಷೆಯಲ್ಲಿ ಪ್ರಮುಖವಾಗಿ ಕಾಣಸಿಕೊಳ್ಳುವವು

ಮಂಟಪಮಾಲೆ

೩೧

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ನಮ್ಮ ನಾಡಿನಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ. ಅಲ್ಲದೆ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನ ಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ ಬೆಳಕನ್ನು ಉಂಟು ಮಾಡಿವೆ. ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸ ಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರ ವಿಧಾನಗಳ ನಿರ್ಮಾಣ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಸಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು ವಿಶ್ವವಿದ್ಯಾಲಯದಲ್ಲಿ ಪ್ರತಿವಾರ ಮಂಟಪ ಎಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕ ವಾಗುವವೆಂಬ ನಂಬಿಕೆಯಿಂದ ಕಡಿಮೆ ಬೆಲೆಯ ಕಿರು ಪುಸ್ತಿಕೆಗಳ ರೂಪದಲ್ಲಿ ಅವನ್ನು ಪ್ರಕಟಿಸಿ ನಿಮ್ಮ ಕೈಗಿಡುತ್ತಿದ್ದೇವೆ.

ಡಾ. ಚಂದ್ರಶೇಖರ ಕಂಬಾರ
ಕುಲಪತಿಯವರು

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ